ಶ್ರೀ ಧೂಳಪ್ಪ ಬಿ. ಎ., ಇವರು ಚಿತಾಪುರ ತಾಲೂಕಿನ ಕೊಲ್ಲೂರಿನಲ್ಲಿ ಮಾದರಿಯ ಪ್ರಾಥಮಿಕ ಶಾಲೆಯ ಮುಖ್ಯಾಧ್ಯಾಪಕರು- ಸಾಹಿತ್ಯಾಭ್ಯಾಸಿಗಳು. ಸಮಾಜ, ಸಾಹಿತ್ಯ ಕಲೆ ಮುಂತಾದುವುಗಳ ಪೋಷಣೆಗಾಗಿ ಶ್ರಮಿಸುವ ಉತ್ಸಾಹೀ ಕಾರ್ಯಕರ್ತರು.

ಶ್ರೀ ಮಹಿಪಾಲರಡ್ಡಿ ಶಿಪ್ಪರೆಡ್ಡಿ ಇವರು ಕೊಲ್ಲೂರಿನ ವ್ಯವಸಾಯ ಸೇವಾ ಸಹಕಾರ ಸಂಘದ ಅಧ್ಯಕ್ಷರು. ಉತ್ಸಾಹೀ ಸಾಮಾಜಿಕ ಕಾರ್ಯಕರ್ತರು. ಸ್ವಭಾವದಿಂದ ಸೌಜನ್ಯ ಶೀಲರು. ಸಾಹಿತ್ಯದ ಬೆಳವಣಿಗೆಯಲ್ಲಿ ಆಸಕ್ತಿಯುಳ್ಳವರು.

ಸಹಾಯಕರು (೧೦ ರೂಪಾಯಿ)

ರಂಗಂಪೇಟೆಯಲ್ಲಿ ಸ್ಥಾಪಿತವಾದ ಭಾರತ ಜನರಲ್ ಸೊಸಾಯಿಟಿ ಕೆಲವರುಗಳ ಸಹಾಯದಿಂದ ಸ್ಥಾಪಿತವಾಗಿದೆ. ವಿವಿಧ ವ್ಯವಹಾರಗಳಲ್ಲಿ ಜನತೆಯೊಡನೆ ಸಹಕರಿಸುವದೇ ಇದರ ಧ್ಯೇಯವಾಗಿದೆ,

ದಿ. ಪರಮಣ್ಣ ಹಸನಾಪೂರ ಇವರ ಅಡತಿ ಅಂಗಡಿ ರಂಗಂಪೇಟೆಯಲ್ಲಿ ಹೆಸರುವಾಸಿಯಾದ ಅಡತಿ ಅವರು ತಮ್ಮ ಜೀವಿತಕಾಲದಲ್ಲಿ ನಡೆಸಿಕೊಂಡು ಬಂದ ಕೆಲ ಆದರ್ಶಗಳನ್ನೇ ಶ್ರೀ ಗೋಣೆಪ್ಪ ಮುಂತಾದವರು ಪಾಲಿಸುತ್ತಾ ನಡೆದಿದ್ದಾರೆ.

ಶ್ರೀ ಗಿರೆಣ್ಣ ರಾಮಣ್ಣ ಕಡಬೂರ. ಇವರು ರಂಗಂಪೇಟೆಯ ಪ್ರಸಿದ್ಧ ವ್ಯಾಪಾರಿಗಳಲ್ಲಿ ಒಬ್ಬರು. ಸಾಹಿತ್ಯ ಪ್ರೇಮಿಗಳು ತಮ್ಮ ಸ್ವಂತ ಪರಿಶ್ರಮದಿಂದ ವ್ಯವಹಾರವನ್ನು ವಿಸ್ತರಿಸಿದ ಕಾರ್ಯ ಕುಶಲರು, ವಿನಯಶೀಲರು. ಇವರ ತಮ್ಮಂದಿರಾದ ಸಬ್ಬಣ್ಣ ಈರಣ್ಣ ಮುಂತಾದವರು ಇವರನ್ನು ಅನುಸರಿಸಿಕೊಂಡು ವ್ಯವಹಾರವನ್ನು ವಿಸ್ತರಿಸಿದ್ದಾರೆ.

ಶ್ರೀ [illegible]ನ್ನಾಥ ಗುರಪ್ಪ ತ್ರಿವೇದಿ ಇವರು ಉತ್ಸಾಹೀ ಸಾಮಾ[illegible] ಕಾರ್ಯಕರ್ತರು. ಸಾಹಿತ್ಯ, ಸಂಸ್ಕೃತಿ ಮತ್ತು ಕಲೆಯ ಬೆಳವಣಿಗೆಗಾಗಿ ಶ್ರಮಿ[illegible]ದವರು. ಉದ್ಯೋಗಶೀಲರು. ರಂಗಂಪೇಟೆಯ ಪ್ರಗತಿಶೀಲ ವ್ಯವಹಾರಸ್ಥ[illegible] ಇವರೊಬ್ಬರು.


ಶ್ರೀ ನಾರಾಯಣಾಚಾರ್ಯ ಶ್ರೀನಿವಾಸಚಾರ್ಯ ಪೂಜಾರ್ಹರು ಮೊತಂಬ ಯುವರು. ಪರಭಣಿ ಜಿಲ್ಲೆಯ ಜಾಳಾಪೂರದಲ್ಲಿ ಜ್ಯೂನಿಯರ್ ಇಂಜಿನಿಯರಾಗಿ ಕೆಲಸ ಮಾಡುತ್ತಿದ್ದಾರೆ. ದಕ್ಷ ಅನುಭವಿ ಮತ್ತು ಕಾರ್ಯಕುಶಲ ಅಧಿಕಾರಿಗಳೆಂದು ಪ್ರಸಿದ್ಧ ಹೊಂದಿದ್ದಾರೆ. ಜನಾನುರಾಗ ಮತ್ತು ಅಧಿಕಾರಿಗ ವಿಶ್ವಾಸಕ್ಕೆ ಪಾತ್ರರಾದ ಕೆಲವೇ ವಿಶಿಷ್ಟ ಅಧಿಕಾರಿಗಳಲ್ಲಿ ಇವರೊಬ್ಬರು.

ಶ್ರೀ ಚಂದ್ರಶೇಖರ ರಾಜಗಾರ ಇವರು ಕೊಲ್ಲೂರಿನ ಮಾದರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರು. ಶಿಕ್ಷಣಕ್ಷೇತ್ರದಲ್ಲಿ ಆಸಕ್ತಿಯುಳ್ಳವರು. ಶಾಲಾಭಿವೃದ್ಧಿ ಕಾರ್ಯದಲ್ಲಿ ನಿರತರು

ಶ್ರೀ ಶಿವಶರಣಪ್ಪ ಬೆನಕ್ ಶಹಪುರ ಇವರೂ ಕೊಲ್ಲೂರಿನಲ್ಲಿ ಉಪಾಧ್ಯಾಯರು. ಶಾಲೆಯ ಪ್ರಗತಿಯಲ್ಲಿ ಆಸಕ್ತಿಯಿದ್ದು, ಮಕ್ಕಳ ಸರ್ವಾಂಗೀಣ ಉನ್ನತಿಯ ಬಗ್ಗೆ ಶ್ರಮಿಸುತ್ತಿರುವರು.

ಶ್ರೀ ಕರಬಸಪ್ಪ ಸಾಹು ಬಿರಾಳ ಇವರು ಕೊಲ್ಲೂರಿನ ಸಾಹುಕಾರರು. ಸ್ವಭಾವದಿಂದ ಸರಳರು. ಸಾಹಿತ್ಯ ಪ್ರೇಮಿಗಳು.

ಮಂದಾಕಿನಿ



ಪುಟ ೨ } " ವಸಂತ ಸಂಚಿಕೆ " { ಸಂಚಿಕೆ ೩

*** ಮಂಗಲ ಸ್ತುತಿ ***

ಘುಳು ಘುಳುದ್ಘುಳು ಘುಳುಘುಳುದ್ಘುಳು ।
ಧಿಳಿ ಧಿಳೀ ಧಿಳಿರೆಂದು ಮೊರೆವುತೆ ।
ಯಿಳಿದು ಬರುತಿಹ ದೇವಗಂಗೆಯು ಶಿರದೊಳಾಂತಭವಾ ॥
ಕುಳಿರುವೆಟ್ಟನ ಕುವರಿಯುನು ಸತಿ ।
ತೊಳಗುವರ್ಧಾಂಗದೊಳು ತಾಳ್ದನೆ ।
ತಳುವದೆನ್ನನು ಸಲಹು ನಿನ್ನಯ ಚರಣ ನಂಬಿರುವೆ ॥

ಶ್ರೀ ಚರಬಸವೇಶ್ವರ ಪುರಾಣ - ಸಂಧಿ ೧೪. ಪದ ೧.

ವಂದನೆ

* * * * *

ಅವಿರತ ಭವ ಭಾವನಾತಿದೂರಂ
ಭವ ವಿಮುಖೈರ್ಮುನಿಭಿಃ ಸದೈವ ದೃಶ್ಯಂ ।
ಭವಜಲಧಿ ಸುತಾರಣಾಂಘ್ರಿಪೋತಂ
ಶರಣಮಹಂ ರಘುನಂದನಂ ಪ್ರಪದ್ಯೇ ॥

ಭವಸಾಗರದಲ್ಲಿ ಮುಳುಗಿದವರಿಗೆ ಅಗೋಚರನು, ಭವಬಂಧನ ದಾಟಿ ಹೊರಬಂದ ಮಹಾತ್ಮರಿಗೆ ದೃಶ್ಯಮಾನನೂ, ಭವಜಲಧಿಯನ್ನು ದಾಟಲು ಯಾವನ ಪಾದಪದ್ಮಗಳು ನೌಕೆಯಂತಿರುವವೊ ಅಂಥ ರಘುನಂದನನಿಗೆ ಶರಣಾಗತನಾಗಿ ನಮಿಸುತ್ತೇನೆ.

ಪರಧನ ಪರದಾರ ವರ್ಜಿತಾನಾಂ
ಪರಗುಣಭೂತಿಷು ತುಷ್ಟಮಾನಸಾನಾಂ ।
ಪರಹಿತ ನಿರತಾತ್ಮನಾಂ ಸುಸೇವ್ಯಂ
ರಘುವರಮಂಬುಜಲೋಚನಂ ಪ್ರಪದ್ಯೇ ॥

ಪರಧನ ಪರಸ್ತ್ರೀಸಂಗ ರಹಿತರಾದವರಿಂದಲೂ, ಪರರಲ್ಲಿನ ಗುಣರಾಶಿಯನ್ನು ಕಂಡು ಸಂತುಷ್ಟರಾಗುವವರಿಂದಲೂ ಮತ್ತು ಪರಹಿತ ಕಾರ್ಯದಲ್ಲಿಯೇ ನಿರತರಾದವರಿಂದಲೂ ಸದಾ ಸುಸೇವ್ಯನಾದ ಕಮಲದಂತೆ ಕಣ್ಣುಗಳುಳ್ಳ ರಘುಕುಲ ಲಲಾಮನಿಗೆ ವಂದಿಸುತ್ತೇನೆ.

(ಅಧ್ಯಾತ್ಮ ರಾಮಾಯಣ)

ವಿಚಾರ ದೀಪ್ತಿ

:: ವಿಶ್ವಪ್ರಜ್ಞೆ, ಎಂಬ ಭಾವ ::

ಸಗರ ಕೃಷ್ಣಾಚಾರ್ಯ

ಆದೇ ತಾನೇ ಹುಟ್ಟಿದ ಮಗು ಏನನ್ನೂ ಅರಿಯದು. ಅದಕ್ಕೆ ತನ್ನ ಪರಿಸರದ ಪರಿಚಯವೇ ಇರುವುದಿಲ್ಲ. ಬೆಳೆಯುತ್ತ ನಡೆದಹಾಗೆ ಅದಕ್ಕೆ ತನ್ನ ಮನೆಯವರ, ಹತ್ತಿರದ ಮನೆಯವರ ಪರಿಚಯವಾಗತೊಡಗುತ್ತದೆ ಕೈಕಾಲು ಸದೃಢವಾಗಿ ಆಟ ಪಾಠಗಳನ್ನು ಕಲಿಯುವಾಗ, ತನ್ನ ಶಾಲಾ ಗುರುಗಳ ಸಹಪಾಠಿಗಳ ಸಂಪರ್ಕ ಹೊಂದುತ್ತದೆ. ಆದರೆ ಅದಕ್ಕಿಂತ ಮೊದಲು ಮಗುವಿಗೆ ತಾಯಿಯೇ ಮೊದಲ ಗುರು, ಮನೆಯೇ ಮೊದಲ ಪಾಠಶಾಲೆ. ಅವನ ವಿದ್ಯಾರ್ಥಿಜೀವನ ಅಲ್ಲಿಂದಲೇ ಪ್ರಾರಂಭ. ಆ ಸಮಯದಲ್ಲಿ ಅವನ ಮನಸ್ಸು ಮೃದುವಾದ ಮೇಣ ಇದ್ದ ಹಾಗೆ; ಅದರ ಮೇಲೆ ಏನನ್ನು ಮೂಡಿಸುವರೋ, ಅದು ಮೂಡುವುದು. ಅದೊಂದು ಟೇಪ್ ರಿಕಾರ್ಡ ಇದ್ದ ಹಾಗೆ. ಅಂಥ ಸಮಯದಲ್ಲಿ ತಾಯಿಯಾದವಳು ಮೊದಲು ಒಳ್ಳೆಯ ಸಂಸ್ಕಾರದಲ್ಲಿ ಆ ಮಗುವನ್ನು ಬೆಳೆಸಬೇಕು. ತಂದೆಯಾದವನೂ ಅಷ್ಟೇ ಎಚ್ಚರಿಕೆಯಿಂದ ಅದನ್ನು ಪೋಷಿಸಿಕೊಂಡು ಬರಬೇಕು. ಶಾಲೆಯಲ್ಲಿ ಗುರುವು ಅದನ್ನು ವಿಕಸನಗೊಳಿಸಿ ಅವನ ಜೀವನಕ್ಕೆ ಅಂದ ತರುವಂತಹ ಶಿಕ್ಷಣ ಒದಗಿಸಬೇಕು. ಆ ಮೂರು ವರ್ಷದ ಬುದ್ಧಿಯೇ ನೂರು ವರ್ಷಗಳ ಕಾಲ ಉಳಿಯಬಲ್ಲುದು. ಅದಕ್ಕಂತೆಯೇ ನಮ್ಮ ಉಪನಿಷತ್ತುಗಳು ಮಾತೃದೇವೋ ಭವ, ಪಿತೃದೇವೋ ಭವ ಆಚಾರ್ಯದೇವೋ ಭವ ಎಂದು ಎಚ್ಚರಿಸಿವೆ. ನಿಸ್ವಾರ್ಥ ಮನೋಭಾವನೆಯಿಂದ ಕೂಡಿದ ಇಂಥ ದೇವತಾಸ್ಥಾನ, ತಾಯಿ-ತಂದೆ ಹಾಗು ಗುರುವಿನಿಂದ ಪಡೆದ ಶಿಕ್ಷಣ, ಜೀವನಕ್ಕೊಂದು ಮೆರಗು ತರುತ್ತದೆ. ದೃಷ್ಟಿ ವಿಶಾಲವಾಗುತ್ತದೆ. ಶುಷ್ಕ ಪಾಂಡಿತ್ಯವೇ ಬಾಳ ಬಂಗಾರವಾಗುವುದಿಲ್ಲ. ವಿಶಾಲ ಹೃದಯ, ಪರಹಿತ ದೃಷ್ಟಿ ವಿಸ್ತರಗೊಂಡು ವಿಶ್ವವೇ ತನ್ನ ಕುಟುಂಬ, ಸರ್ವರ ಸುಖವೇ ತನ್ನ ಸುಖ, ಎಂಬ ಉದಾತ್ತ ಭಾವನೆ ಬೆಳೆದುಬರುತ್ತದೆ.

ತಾನು ಕೇವಲ ತನ್ನ ಮನೆಯವರ ದಾಸನಲ್ಲ; ಊರವರ ಬಂಧುವಲ್ಲ; ನಾಡಿನ, ದೇಶದ ಪುತ್ರನೂ ಅಲ್ಲ, ತಾನು ವಿಶ್ವ ಸಂತಾನ! ವಿಶಾಲ ವಿಶ್ವವೇ ತನ್ನ ಮನೆ; ವಿಶ್ವದ ಜನರೇ ತನ್ನ ಬಂಧುಗಳು; ವಿಶ್ವ ಹಿತಕ್ಕಾಗಿ ಈ ದೇಹ

ವನ್ನು ಸವಿಸುವುದೇ ತನ್ನ ಪರಮ ಪುರುಷಾರ್ಥ. ತನ್ನತನ ಮರೆತು ತನ್ನ ತ
ಬೆಳೆಸುವುದೇ ತನ್ನ ಧರ್ಮ ಎಂಬ ರೀತಿಯಲ್ಲಿ ಮನಸ್ಸು ಪರಿಪಾ
ಹೊಂದಬೇಕು.

ನಮ್ಮ ಸನಾತನ ಧರ್ಮ, ಇದನ್ನೇ ಸಾರಿ ಹೇಳುತ್ತದೆ. ಋಷಿಗಳೂ ರಸಋಷಿಗಳೂ ದಾಸರೂ. ಶರಣರೂ ಇದನ್ನೇ ಹಾಡಿದ್ದಾರೆ-'ವಸುಧಾ ಏ ಕುಟುಂಬಕಂ, 'ಸರ್ವೇಜನಾಃ ಸುಖಿನೋ ಭವಂತು!' 'ದಯೆಯೇ ಧರ್ಮ ಮೂಲವಯ್ಯ' 'ಏನಾದರೂ. ಎಂತಾದರೂ ನೀನು ವಿಶ್ವಮಾನವನಾಗು ಎಲ್ಲೆಲ್ಲು ಸಂತೋಷ ಸೌಹಾರ್ದ, ನಲ್ಮೆಗಳ ಮಲ್ಲಿಗೆಯ ನರಳಿ ನಿಜಶಾಂತಿ ಬರಲಿನ್ನು ಸ್ವಪ್ನ ಶಾಂತಿಯು ಬೇಡ, ವಿಜಯ ಹಗೆಯ ಬೇಗ ಮನ ಗೆಲ್ಲಲಿ! ಎಂಬ ಒಂದಲ್ಲ, ಎರಡಲ್ಲ, ಸಾವಿರಾರು ಮಂತ್ರನಂತ ಮಾತುಗಳು, ಮಾನವನಲ್ಲಿ ವಿಶ್ವಪ್ರಜೆಯಾಗುವ ಭಾವ ಬಲಿಸುತ್ತದೆ.

ಇಂಥ ವಿಶಾಲ ಮನೋಭಾವ ಬೆಳೆಯಲು ತನ್ನಂತೆ ಪರರನ್ನೂ ಬಗೆಯುವ ಕಲೆ ಅವಗತಮಾಡಿಕೊಳ್ಳಬೇಕು. ಹೃದಯದ ವೈಶಾಲ್ಯ ಹೆಚ್ಚಬೇಕು. ಅದಕ್ಕಾಗಿ ಆರ್ಯ ಸಂಸ್ಕೃತಿಯ ಪೂರ್ಣ ಪರಿಚಯ ಪಡೆಯಬೇಕು. ಗೀತೆಯಲ್ಲಿ ಹೇಳಿದಹಾಗೆ..ವಿದ್ಯಾ ವಿನಯ ಸಂಪನ್ನೇ ಬ್ರಾಹ್ಮಣೇಗವಿಹಸ್ತಿನಿ ಶುನಿಚೈವ ಶ್ವಪಾಕೇಚ ಪಂಡಿತಾಃ ಸಮದರ್ಶಿನಃ, ಎಂಬುದನ್ನು ಚ,ತು ತಪ್ಪದಂತೆ ಸಾಧಿಸಿಕೊಂಡು ಹೋಗಬೇಕು. ಆಗ ಅವನೆದುರು ಎಲ್ಲರೂ ಸಮಾನರು. ಸ್ವ. ಪರ'ಎಂಬ ಭಾವ ಅಳಿಸಿ, ತಾನು ವಿಶ್ವಪ್ರಜೆ! ಎಂಬ ಭಾವ ನಿಚ್ಚಳವಾಗುತ್ತದೆ. ಅವನಿಗೆ ಮಹಾತ್ಮ, ದುರಾತ್ಮ, ಪಶು, ಆನೆ ನಾಯಿ ಎಲ್ಲವೂ ಸಮ. ಎಲ್ಲರಲ್ಲಿಯೂ ಒಬ್ಬ ದೇವನನ್ನೇ ಕಾಣುತ್ತಾನೆ. ಅವರ ಹಿತವೇ ತನ್ನ ಹಿತ ಅದೇ ಪರಮಾತ್ಮನ ಸೇವೆ ಎಂದು, ತಿಳಿದು ಕೊಳ್ಳುತ್ತಾನೆ. ಅಂಥವನಲ್ಲಿ ಸ್ವಾರ್ಥ. ಸ್ವಜನಪಕ್ಷಪಾತ, ದ್ವೇಷ, ಮತ್ಸರ ಮುಂತಾದುವುಗಳಿಗೆ ಎಡೆಯೇ ಇರುವುದಿಲ್ಲ. ಅಂಥವನು ವಿಶ್ವ ಮಾನವನಾಗಿಯೂ ವೇದವ್ಯಾಸ ಬುದ್ಧ, ಕ್ರಿಸ್ತ, ಮಹಾತ್ಮಾ ಗಾಂಧಿಯಂತೆ ದೇವ ಮಾನವನಾಗಿಯೂ, ವಿಶ್ವ ವಿಭೂತಿಯಾಗಿಯೂ ಮೆರೆಯುತ್ತಾನೆ. ಅಂಥ ಸಂತಾನ ಬೆಳೆಯ ಬರಲೆಂದೆ ನಮ್ಮ ಹಾರೈಕೆ.

(ಆಕಾಶವಾಣಿಯ ಕೃಪೆಯಿಂದ)

ಮಹಾ ಮಹಿಮ

ಶ್ರೀ ಚರಬಸವ ತಾತನವರು

ಭಾರತವು ಪುಣ್ಯಭೂಮಿ ಪಾವನತರ ಪರಂಪರೆಯಿಂದ ಮೆರೆಯುವ ದೇಶದ ದಕ್ಷಿಣ ಭಾಗದಲ್ಲಿದ್ದ ಕರ್ನಾಟಕವು ಅಷ್ಟೇ ಉಜ್ಜ್ವಲ ಹಾಗು ಪವಿತ್ರತಮ ಸಂಸ್ಕೃತಿಯಿಂದ ಬೆಳಗುವ ನಾಡು. ಈ ನಾಡಿನ ಇತಿಹಾಸ, ಕಲೆ, ಸಂಸ್ಕೃತಿ, ಸಾಹಿತ್ಯ, ಉದಾತ್ತವಾದ ಧರ್ಮಶ್ರದ್ಧೆ ಮುಂತಾದುದು ಅವರ್ಣನೀಯ- ಇಂಥ ಮಂಗಲಮಯ ನಾಡಿನ ಒಂದು ಭಾಗವಾದ 'ಸಗರನಾಡು' ಎಲ್ಲರ ಕಣ್ಮನಗಳನ್ನು ಸೆಳೆದು ತನ್ನೆಡೆಗೆ ಆಕರ್ಷಿಸುವ ಸುಸಂಪನ್ನನಾಡು !

ಈ ನಾಡಿನಲ್ಲಿ ಆಗಿಹೋದ ಅರಸರಿಗೆ, ಕವಿಗಳಿಗೆ, ಸಂತ-ಸೂಫಿಗಳಿಗೆ, ಆಚಾರ್ಯರಿಗೆ, ಶರಣರಿಗೆ ಸಂದಗೌರವ-ಘನತೆ ಅಷ್ಟಿಷ್ಟಲ್ಲ. ಪುರಾಣ ಕಾಲದಿಂದಲೂ ಈ ನಾಡು ತನ್ನ ಭವ್ಯ ಪರಂಪರೆಯನ್ನು ಉಳಿಸಿಕೊಂಡು ಬಂದಿದೆ. ಸಗರರಾಯನ ಮಕ್ಕಳನ್ನು ಉದ್ಧರಿಸಿದ ದೇವಗಂಗೆ 'ಮಂದಾಕಿನಿ' ಈ ಸಗರಾದ್ರಿಯಲ್ಲಿಯೇ ವಿರಾಜಮಾನಳಾಗಿದ್ದಾಳೆ. ಸಿದ್ಧಪುರುಷರ ಇಷ್ಟಾರ್ಥಗಳನ್ನು ಪೂರೈಸಿದ, ಈಗಲೂ ಪೂರೈಸುತ್ತಿರುವ ಸಿದ್ಧಪುಷ್ಕರಣಿಯೂ ಇದೇ ಬೆಟ್ಟದಲ್ಲಿದೆ. ನಾವೀಗ ವರ್ಣಿಸಿ, ನಮ್ಮ ತನು-ಮನಗಳನ್ನು ಪರಿಶುದ್ಧಗೊಳಿಸಿಕೊಳ್ಳಬೇಕೆಂದಿರುವ ಮಹಾಮಹಿಮ ಚರಬಸವತಾತನವರ ಗದ್ದುಗೆಯೂ ಇದೇ ಬೆಟ್ಟದ ತಪ್ಪಲು ಪ್ರದೇಶದಲ್ಲಿ ಸಕಲ ಸದ್ಭಕ್ತರ ಇಷ್ಟಾರ್ಥಗಳನ್ನು ಪೂರೈಸುತ್ತ ಮೆರೆದಿದೆ--ಮೆರೆಯುತ್ತಲಿದೆ

ಈ ಪುರಾಣ ಪುರುಷರು ಈಗ ಸ್ವಲ್ಪದಿವಸಗಳ ಹಿಂದೆಯೇ ಆಗಿ ಹೋದವರು. ಇವರು ಒಳ್ಳೆಯ ಮಹಿಮಾಶಾಲಿಗಳೂ, ಭಕ್ತೋದ್ಧಾರ ಧುರೀಣರೂ ಆಗಿದ್ದಲ್ಲದೆ ತಮ್ಮ ಪವಿತ್ರತಮ ತಪಸ್ಸಿನ ಪ್ರಭಾವದಿಂದಾಗಿ, ಸಕಲ ಮತ-ಧರ್ಮಗಳ ಜನರನ್ನೂ ತಮ್ಮೆಡೆಗೆ ಆಕರ್ಷಿಸಿದ್ದಾರೆ. ಚೈತ್ರ ಶುದ್ಧ ಪಂಚಮಿಯ ದಿವಸ ಜರುಗುವ ಅವರ ರಥೋತ್ಸವಕ್ಕೆ ಎಲ್ಲವರ್ಗದವರೂ ಸೇರಿ, ಅವರ ದರ್ಶನದ ಭಾಗ್ಯವನ್ನು ಪಡೆಯುತ್ತಾರೆ ಇಂಥ ನಾಸ್ತಿಕ್ಯ ಕಾಲದಲ್ಲಿಯೂ ಘನತರವಾದ ಪವಾಡಗಳನ್ನು ತೋರಿ ಆಧ್ಯಾತ್ಮಿಕ ಜೀವನಕ್ಕೆ ಬೇಕಾದ ಶ್ರದ್ಧೆಯು ನಂದಿಹೋಗದಂತೆ ಚಿರನೂತನ ಗೊಳಿಸಿದ್ದಾರೆ.

'ಸಗರನಾಡು' ಬಹು ಸುಂದರನಾಡು ಎಂಬುದನ್ನು ಕವಿ ಇಂದಿರೇಶರು
ತಮ್ಮ 'ಸಗರ ನಾಡಿಗೆ ಬಾ !' ಎಂಬ ಕವನದಲ್ಲಿ ಮನಮುಟ್ಟುವಂತೆ ವರ್ಣಿ
ದ್ದಾರೆ. ಅಂಥ ನಾಡಿನಲ್ಲಿದ್ದ ಶಹಪುರ ತಾಲೂಕಿನ ಅನವಾರವೆಂಬ ಗ್ರಾಮದ
ವೀರಶೈವರ 'ಕಂತಿಮಠ' ಎಂದು ಪ್ರಸಿದ್ಧ ಹೊಂದಿದ ಗುರುಮಠವೊಂದ
ಇತ್ತು. ಆ ಮಠದ ಯಜಮಾನರಾದ ಶೀಲವಂತಯ್ಯನವರು ದಾನ ಧರ್ಮ
ದಯಾನ್ವಿತರೂ, ಮದ ಮತ್ಸರ ರಹಿತರೂ, ಸದಾ ಶಿವಧ್ಯಾನ ತತ್ಪರರೂ, ಜ್ಞಾ
ಸಾಧನ ಮಾರ್ಗನಿರತರೂ, ನಿಸ್ಪೃಹರೂ, ಸುಶೀಲರೂ, ಆಗಿದ್ದರು. ಅವ
ಧರ್ಮಪತ್ನಿ ಅನ್ನಮ್ಮ ಪತಿಗೆ ತಕ್ಕ ಸತಿಯೇ ಆಗಿದ್ದಳು. ಅವರಿಬ್ಬರೂ ಮಕ್ಕ
ಚಿಂತೆಯಲ್ಲಿ ಕೆಲಕಾಲ ಕಳೆದರು. ಅವರಿಗೆ ಒಂದೊಂದು ನಿಮಿಷ ಒಂದೊಂದ
ವರುಷದಂತೆ ಕಾಣುತಿತ್ತು. ಒಂದು ರಾತ್ರಿ ಸ್ವಪ್ನದಲ್ಲಿ ಪರಶಿವನು ಬಂದ
'ಮಗಳೆ, ನೀನಿನ್ನೂ ಚಿಂತಿಸಬೇಡ ನೀನೇನು ಸಾಮಾನ್ಯ ಸ್ತ್ರೀಯಲ್ಲ ನಿನ್ನಂ
ಯೇ ಅತ್ಯಂತ ಮಹಿಮಾಶಾಲಿಯಾದ ಸುಪುತ್ರನು ನಿನ್ನಲ್ಲಿ ಉದಿಸಿ ಬರು
ನು !' ಎಂದು ನುಡಿದನು. ಈ ಹರ್ಷಮಯ ಸಂಗತಿಯನ್ನು ಆಕೆ ಸಂಭ್ರಮ
ಭರದಲ್ಲಿ ತನ್ನ ಪತಿಗೆ ನಿವೇದಿಸಿದಳು. ಆತನ ಸಂತಸಕ್ಕೆ ಪಾರವಿರಲಿ
'ದೇವಿ ! ಚರನು ನಮ್ಮಮೇಲೆ ಅನುಗ್ರಹಿಸಿದ್ದಾನೆ. ತಪ್ಪದೇ ನಮಗೆ ಪು
ಸಂತಾನವಾಗುವುದು.' ಎಂದು ತನ್ನ ಸತಿಗೆ ಸಂತೈಸಿ ಶಿವಧ್ಯಾನ ತತ್ಪರನಾ
ನು. ಆಕೆಯೂ ಕೆಲ ಸಮಯ ಪರಮಾತ್ಮನನ್ನೇ ತದೇಕ ನಿಷ್ಠೆಯಿಂದ ಸೇ
ಸುತ್ತಿರಲು ಪವಿತ್ರವಾದ ಗರ್ಭವನ್ನು ಧರಿಸಿದಳು. ಪುತ್ರಜನನವಾಗುವವರೆಗ
ಆ ಗರ್ಭಕ್ಕೆ ಯಾವ ಬಾಧೆಯೂ ತಗುಲಲಿಲ್ಲ, ಶ್ರೀ ಶಾಲಿವಾಹನ ಶಕೆ ೧೬೪
ರಲ್ಲಿ ಪುರಹರನ ಕೃಪೆಯಿಂದ ಲೋಕವನ್ನೇ ಪಾವನಗೈವ ಪುತ್ರರತ್ನನ ಅ
ತಾರವಾಯಿತು. ಆಗ ತಾಯಿತಂದೆಗಳಿಗೆ ಆದ ಸಂತಸ ಅಷ್ಟಿಷ್ಟಲ್ಲ. ಬಡವನಿ
ಕಡವರ ಸಿಕ್ಕಂತೆ, ಕುರುಡನಿಗೆ ನಯನಗಳು ಬಂದಂತೆ ಆಯಿತು. ಗುರುಶ್ರೇಷ್ಠ
ರೊಬ್ಬರನ್ನು ಕರೆಸಿ, ಸಡಗರದಿಂದ ಲಿಂಗಧಾರಣೆ ಮಾಡಿಸಿದರು. ಜನಿಸಿ
ಹನ್ನೆರಡನೆಯ ದಿವಸದಂದು ಬಸವಯ್ಯನೆಂದು ನಾಮಕರಣ ಮಾಡಿದರು

"ಮಂದಾಕಿನಿ"

ಬಾಲಕನು ಬಾಲಲೀಲೆಗಳನ್ನು ತೋರಿಸುತ್ತ ತಾಯ್ತಂದೆಗಳ ಆನಂದ-ವನ್ನು ಹೆಚ್ಚಿಸುತ್ತಿರಲು. ಆದ ಬಾಡದ ಮೂಲೆ ಮಠದ ಸಾಧು ವರ್ಯರಾದ ಶ್ರೀ ಗುರು ಚೆನ್ನವೀರ ಸ್ವಾಮಿಗಳಿಂದ ಚರಬಸವನಿಗೆ ಪರಮ ಶಿವದೀಕ್ಷೆಯನ್ನು ಕೊಡಿಸಿದರು.

ಆ ತರುವಾಯ ಚರಬಸವಯ್ಯನವರು ಪ್ರತಿ ನಿತ್ಯವೂ ತಪ್ಪದೆ ಲಿಂಗಾರ್ಚನೆ ಗೈಯುತ್ತಿದ್ದರು. ಸದಾ ಶಿವಭಜನೆ, ಶಿವಕಥಾಲಾಪ, ಸತ್ಸಂಗ, ಇವುಗಳಲ್ಲಿಯೇ ಮಗ್ನರಾಗಿರುತ್ತಿದ್ದರು. ಗೃಹಕೃತ್ಯಗಳನ್ನೆಸಗುವಾಗಲೂ ಪಾವಿತ್ರ್ಯ ಅವರನ್ನು ಬಿಟ್ಟಿರುತ್ತಿಲ್ಲ. ತಮ್ಮ ದರ್ಶನಕ್ಕೆಂದು ಬಂದ ಭಕ್ತಾದಿಗಳಿಗೆ, ನೀತಿ, ಸದಾಚಾರ, ಸದ್ಭಕ್ತಿ-ಮೊದಲಾದುವುಗಳನ್ನು ಉಪದೇಶಿಸುತ್ತಿದ್ದರು- ಈ ರೀತಿ ಪ್ರಾಪ್ತ ವಯಸ್ಕರಾದಕೂಡಲೆ, ಸಗರದ ಗಣಾಚಾರಿ ಮಠದ ಗುರು ಬಸವಯ್ಯನವರ ಸುಪುತ್ರಿ ಸೂಗಮ್ಮಾಂಬಿಯೊಡನೆ ವಿವಾಹ ವಾಯಿತು. ಗುರು ಬಸವಯ್ಯನವರು ತಮ್ಮ ಪುತ್ರಿಗೆ, 'ಮಗಳೆ ನೀನು ಉತ್ತಮ ಗೃಹಿಣಿಯಾಗ ಬೇಕಾದರೆ, ನಿನ್ನಲ್ಲಿ ಸಕಲ ಸದ್ಗುಣಗಳೂ ಇರಬೇಕು. ಗುರುಲಿಂಗ ಜಂಗಮ ಸೇವೆಯೇ ಪವಿತ್ರತಮವಾದ ಸೇವೆಯೆಂದು ಭಾವಿಸಬೇಕು. ಎಲ್ಲರನ್ನೂ ಆದ ರದಿಂದ ಕಾಣಬೇಕು. ಮನೆಯಲ್ಲಿ ನಾದುನಿತ್ತಿಗ್ತೆ, ಭಾವಮೈದುನ ಇವರಲ್ಲಿ ಭೇದಬುದ್ಧಿ ತೋರಬಾರದು. ಅತ್ತೆ ಮಾವನ ಸೇವೆ ಸದಾ ಆದರ ಪೂರ್ವಕ ವಾಗಿ ಮಾಡಬೇಕು. ಮನೆಯಲ್ಲಿ ದುಡಿಯುತ್ತಿರುವ ಆಳುಗಳನ್ನು ಪರಮ ಸೋದರರೆಂದು ತಿಳಿದು ಉಪಚರಿಸಬೇಕು ದುರುಳರಿಂದ ದೂರವಿರಬೇಕು. ಪರರಹಿತ ಸಾಧನೆಯೇ ನಿನ್ನ ಜೀವನದ ಗುರಿಯೆಂದು ಭಾವಿಸಬೇಕು. ಪತಿಯ ಕಾರ್ಯದಲ್ಲಿ ಮಂತ್ರಿಯಂತೆ ಸಲಹೆ ನೀಡಬೇಕು. ಮನೆ ಕೆಲಸಗಳಲ್ಲಿ ಆಳಿನಂತಿರ ಬೇಕು. ಭೋಜನ ಸಮಯದಲ್ಲಿ ವರಮಾತೆಯಂತಿರಬೇಕು. ಅದೇರೀತಿ ರತಿ ಯ ಸಮಯದಲ್ಲಿ ರಂಭೆಯಂತೆಯೂ. ಶಮದಮಾದಿಗಳಲ್ಲ ಪೃಥ್ವಿಯಂತೆಯೂ ಇದ್ದು ಪಾತಿವ್ರತ್ಯವನ್ನು ಕಾಯ್ದುಕೊಂಡು ಬಾಳಬೇಕು! ಎಂದು ಕಂಬನಿ ದುಂಬಿ, ಮೈದಡವಿ, ಮುತ್ತಿಟ್ಟು, ಹರಸಿ ಗಂಡನ ಮನೆಗೆ ಕಳಿಸಿದರು. ಆಕೆ ತಂದೆಯಮಾತು ಸ್ವಲ್ಪವೂ ತಪ್ಪದಂತೆ ಆಚರಿಸಿ ತನ್ನ ಪತಿಯ ಪ್ರಸಿದ್ಧಿಗೆ ಕಾರಣೀ ಭೂತವಾದಳು,

ಚರಬಸವಾರ್ಯರ ಲಗ್ನವಾಗಿ ಇನ್ನೂ ಆರು ವರ್ಷಗಳು ಪೂರ್ತಿಯಾಗಿರಲಿಲ್ಲ. ಅಷ್ಟರಲ್ಲಿ ಅವರಿಗೆ ಮಾತಾ ಪಿತೃಗಳ ವಿಯೋಗ ವುಂಟಾಯಿತು. ಅವರು ಮಾಹೇಶ್ವರರಾಗಿ ಮಠಾಧಿಕಾರಿಗಳಾಗಿದ್ದರೂ ಯಾಚನೆಗಿಂತ ಕಾಯಕವೇ ಮೇಲೆಂದು ತಿಳಿದು, ಶಿವಶರಣ ದೇವರ ದಾಸಿಮಯ್ಯನವರಂತೆ ಜವಳಿ ವ್ಯಾಪಾರವನ್ನು ಕೈಕೊಂಡು ರೂಪಾಯಿಗೆ ಕೇವಲ ಒಂದಾಣೆಯಂತೆ ಲಾಭ ಪಡೆಯಬೇಕೆಂಬ ನೇಮವನ್ನು ಮಾಡಿಕೊಂಡರು. ಜವಳಿ ವ್ಯಾಪಾರದಲ್ಲಿ ಬಂದ ಲಾಭವನ್ನು ತ್ರಿಜೋರಿಯಲ್ಲಿ ಹಾಕಿಡದೆ ಗುರುಲಿಂಗ ಜಂಗಮರ ಸೇವೆಗಾಗಿಯೂ, ದಾಸೋಹಕ್ಕಾಗಿಯೂ ವಿನಿಯೋಗಿಸಿದರು. ಇದು ಅವರ ತಮ್ಮ ರಾಚಯ್ಯನಿಗೆ ಸರಿಬೀಳದೆ ಅಣ್ಣನವರನ್ನು ಪಾಲು ಕೊಡಬೇಕೆಂದು ಕೇಳಿದನು. ಇದನ್ನರಿತ ಬಸವಾರ್ಯರು ಎಲ್ಲವನ್ನು ಆತನಿಗೆ, ಒಪ್ಪಿಸಿ, ತಮ್ಮ ಧರ್ಮಪತ್ನಿಯೊಂದಿಗೆ ಶಹಪುರಕ್ಕೆ ಬಂದರು. ಶಹಪುರದಲ್ಲಿ ಶಿವಭಕ್ತರು ಇವರಿಗೆ ಆಶ್ರಯವನ್ನಿತ್ತು ಮಠವನ್ನು ಸ್ಥಾಪಿಸಿ ಕೊಟ್ಟರು. ಈ ಮಠದಲ್ಲಿಯೇ ಜವಳಿ ವ್ಯಾಪಾರ ಕಾಯಕದಿಂದ ಉಂಟಾದ ಲಾಭದಿಂದ ಘನತರವಾಗಿಯೂ ನಿರ್ವಿಘ್ನವಾಗಿಯೂ ದಾಸೋಹವನ್ನು ಸಾಗಿಸಿದರು. ಇವರ ಭಕ್ತಿಯ ಪ್ರಭಾವದಿಂದಲೂ, ಯೋಗ್ಯವಾದ ನಡತೆಯಿಂದಲೂ ಅನೇಕ ಮಹಿಮೆಗಳಾಗಲು ಪ್ರಾರಂಭವಾದುವು. ಅವರು ತೋರಿದ ಪವಾಡಗಳು ಅನೇಕ, ಬಳಬಟ್ಟಿ ಚೆನ್ನಬಸವಗೌಡರಿಗೆ ಹಮ್ಮಿಣಿಯ ಮಹತ್ವವನ್ನು ತೋರಿಸಿ, ಅವರಿಗೆ ವೀರಶೈವರ ನಿತ್ಯಾಚರಣೆಯನ್ನು ಬೋಧಿಸಿದರು. ಸೀರೆಯ ಮಹತ್ವವನ್ನು ತೋರಿ ಫೌಜುದಾರನಿಗೆ ಗೃಹಸ್ಥಾಶ್ರಮದ ಧರ್ಮವನ್ನು ಉಪದೇಶಿಸಿದರು. ಶ್ರೀ ಶರಣ ಬಸವೇಶ್ವರರ ಪುರಾಣಾರಾಧನ ಕಾಲದಲ್ಲಿ ಮಿತ ಪ್ರಸಾದದಿಂದ ಅಮಿತ ಜನನ್ನು ತೃಪ್ತಿಗೊಳಿಸಿದರು. ತತ್‌ಕ್ಷಣದಲ್ಲಿಯೇ ಬಾಳೆಯ ಕಾಯಿಗಳು ಹಣ್ಣಾಗುವಂತೆ ಮಾಡಿದರು. ಪುರಾಣ ಮಂಟಪಕ್ಕೆ ಹತ್ತಿದ ಬೆಂಕಿಯು ತತ್‌ಕ್ಷಣದಯೇ ತಾನಾಗಿ ಶಾಂತವಾಗುವಂತೆ ಮಾಡಿದರು. ಮುತ್ತಿನ ರಿವ ಮಹತ್ವವನ್ನೂ ತುಪ್ಪದ ಮಹತ್ವವನ್ನೂ ತೋರಿಸಿದರು ಇದೇರೀತಿ ಇನ್ನೂ ಅನೇಕ ಪವಾಗಳನ್ನು ಮೆರೆದು ಪವಾಡ ಪುರುಷರಾದರು. ಪರಮಾತ್ಮನ ಆಜ್ಞೆಯಂತೆ ಅವರು ಶ್ರೀ ಶಕೆ ೧೮೭೪೪ ಫಾಲ್ಗುಣ ಕೃಷ್ಣಪಕ್ಷ ಅಮಾವಾಸ್ಯೆಯ ದಿವಸ ಧರ್ಮ ಮಾಹೇಶ್ವರರ ಸಮ್ಮತಿಯನ್ನು ಪಡೆದು ಲಿಂಗದೊಳು ಬೆರೆತರು.

ಜಿ. ಎಂ. ಗುರುಬಸವಾರ್ಯ

ಆದರ್ಶ ವ್ಯಕ್ತಿ

'ಶ್ರೀ ಸಗರ ಕೃಷ್ಣಾಚಾರ್ಯರು'

ಪಂಡಿತ ಕೆ. ಪಿ. ಶಿವಲಿಂಗಯ್ಯ ಎಂ. ಎ. ಬಿ. ಇಡಿ. ಬೆಂಗಳೂರು.

"ಸಂಸಾರ ವಿಷ ವೃಕ್ಷಸ್ಯ ದ್ವೇಫಲೇ ಅಮೃತೋಪಮೇ।
ಕಾವ್ಯಾಮೃತ ರಸಾಸ್ವಾದ: ಆಲಾಪಸ್ಸಜ್ಜನೈಸ್ಸಹ॥"

ಈ ಜಗತ್ತೆಂಬ ನಂಜಿನ ಮರದಲ್ಲಿ ಎರಡು ಅಮೃತ ಸಮಾನವಾದ ಹಣ್ಣುಗಳಿವೆಯಂತೆ! ಅವೇ ಉತ್ತಮವಾದ ಗ್ರಂಥವನ್ನೋದಿದಾಗ ಆಗುವ ಆನಂದ, ಹಾಗೂ ಸಜ್ಜನರೊಂದಿಗೆ ಮಾತನಾಡುವಾಗ ಉಂಟಾಗುವ ಅನುಭವಗಳು. ಎರಡರಲ್ಲಿಯೂ ನಮ್ಮನ್ನು ನಾವೇ ಮರೆಯುತ್ತೇವೆ. ನನಗಂತೂ ಮನಸ್ಸಿಗೆ ಬೇಸರವಾದಾಗ, ಹೃದಯದಲ್ಲಿ ದುಃಖ ತುಂಬಿದಾಗ, ಯೋಗ್ಯ ಪುಸ್ತಕವನ್ನು ಅವಲೋಕಿಸಬೇಕು, ಇಲ್ಲವೆ ಆತ್ಮೀಯರೊಂದಿಗೆ ಕೆಲಕಾಲ ಸಲ್ಲಾಪ ನಡೆಸಬೇಕು. ಮನಸ್ಸು–ಹೃದಯ ಹಗುರಾದಂತೆಯೆ!

ಈ ದೆಸೆಯಲ್ಲಿ ನನ್ನ ಸುದೈವದಿಂದ ದೊರೆತ ಬಂಧುಗಳಲ್ಲಿ ಪೂಜ್ಯರೂ, ಹಿರಿಯ ವಿದ್ವನ್ಮಣಿಗಳೂ ಆದ ಶ್ರೀ ಸಗರ ಕೃಷ್ಣಾಚಾರ್ಯರು ಬಹು ಮುಖ್ಯರಾದವರು. ಅವರು 'ಸಜ್ಜನರು ಮಾತ್ರವಲ್ಲ' ಒಂದು ಉತ್ತಮ ಗ್ರಂಥವೂ ಹೌದು. ಮಾನವನ ಜೀವಿತಕಾಲದಲ್ಲಿ ಸಂಧಿಸಬಹುದಾದ ಸಹಸ್ರಾರು ಜನ ಮಿತ್ರ ಬಾಂಧವರಲ್ಲಿ ಎಲ್ಲರನ್ನೂ ಜ್ಞಾಪಕದಲ್ಲಿಟ್ಟುಕೊಳ್ಳುವುದಾಗಲಿ ಸನ್ಮಾನ ಪೂಜ್ಯ ಭಾವನೆಯಿಂದ ಕಾಣುವುದಾಗಲಿ ಸಾಧ್ಯವಿಲ್ಲ- ಹೃದಯದಲ್ಲಿ ಸ್ಥಾನ ಕಲ್ಪಿಸಲಾಗುವುದು, ಬಲವಂತದಿಂದಲ್ಲ ಒಲುಮೆಯಿಂದ. ಅದು ತಾನಾಗಿ ಒಲಿದು ಬರಬೇಕು. ಒಮ್ಮೆ ಕೂಡಿ ಬಂದರೆ ಸಾಕು, ಇಡೀ ಜೀವಮಾನದಲ್ಲಿ ಮರೆಯಲಾರದಂತಹ ಬೆಸುಗೆಯೆನಿಸುವುದು. ಅದುವೇ ಮಧುರ ಬಾಂಧವ್ಯ; ಮರೆಯಲಾಗದ ವ್ಯಕ್ತಿತ್ವ. (Un forgettable Personality) ನಾನು ಮಧುಗಿರಿಯ ಪ್ರೌಢಶಾಲೆಯಿಂದ (ಇಲ್ಲಿಗೆ ಅಂದರೆ) ಬೆಂಗಳೂರ ಸೆಂಟ್ರಲ್ ಹೈಸ್ಕೂಲಿಗೆ ವರ್ಗವಾಗಿ ಬಂದ ಕ್ಷಣದಲ್ಲಿಯೆ ನಾಲ್ಕಾರು ಭಾಷೆಗಳಲ್ಲಿ ಪಂಡಿತರಾದ ಆದರೆ ಅಷ್ಟೇ ಸರಳರೆನಿಸಿದ ಕನ್ನಡ ವಿಷಯ ಪರೀಕ್ಷಣಾಧಿಕಾರಿ

Subject Inspector for Kannada) ಯೊಬ್ಬರು ಹೈಸ್ಕೂ ಕರ್ನಾಟಕ ಭಾಗದಿಂದ ಇಲ್ಲಿಗೆ ನೇಮಕವಾಗಿ ಬಂದಿರುವರಾಗಿ ತಿಳಿಯಿತು ಸ್ವಾಭಾವಿಕವಾಗಿ ಪ್ರಕಾರದ ನನಗೆ ಏನೇನೋ ಸೊಗಸಾದ ಕಲ್ಪನೆಗಳುಂಟಾದವು.

ಅಂತಹ ಪ್ರತಿಭಾಶಾಲಿಯ ದರ್ಶನಭಾಗ್ಯ ಪಡೆಯಬೇಕೆಂಬ ಕುತೂಹಲವೂ ಉಂಟಾಯಿತು.

ಆದಿನ ಕೊನೆಯ ದಿನದ ಕೆಲಸವಿಲ್ಲ. ನಮ್ಮ ಶಾಲೆಯನ್ನು ವೀಕ್ಷಿಸಲು ವೀಕ್ಷಣಾಧಿಕಾರಿಗಳ ತಂಡ ಬಂದೇಬಂದಿತು ಆಗ ನನ್ನ ತೀವ್ರವಾದ ಅಪೇಕ್ಷೆಯನ್ನು ಹತ್ತಿಕ್ಕಲು ಶಕ್ಯವಾಗದೇ ಅವರ ದರ್ಶನ ಪಡೆಯಲೇ ಬೇಕೆಂಬ ಇಚ್ಛೆಯಿಂದ ಮುಖ್ಯೋಪಾಧ್ಯಾಯರ ಕೊಠಡಿಯನ್ನು ಹೊಕ್ಕೆನು. ಅಲ್ಲಿ ಕಂಡುದೇನು ? ಬಾಗಿಲಿಕ್ಕೆ ಮುಖವೇ ಚಿರಪರಿಚಿತರಾಗಿದ್ದ ರೀತಿಯ ಪ್ರಸನ್ನ ಮುಖಮುದ್ರೆ, ತೇಜಸ್ವಿಯಾದ ಕಾಂತಿಯ ನೇತ್ರಗಳು, ಫಾಲದಲ್ಲಿ ಶೋಭಿಸುವ ತಿಲಕ, ಸಾದಾ ಉಡುಪು. ಬೆಳ್ಳಗಾದರೂ ಕೃಶವಾದ ಗಾತ್ರ, ಆಳವಾದ ಪಾಂಡಿತ್ಯವನ್ನು ಪ್ರತಿಬಿಂಬಿಸುವ ಆ ದಿವ್ಯ ನಗೆ-ಇವುಗಳಿಂದ ಕೂಡಿದ, ನನ್ನ ನಿರೀಕ್ಷೆಗೂ ಮೀರಿದ-ವ್ಯಕ್ತಿಯ ದರ್ಶನವಾಯಿತು. ಲಘು ಪರಿಚಯವೂ ಆಯಿತು. ನನಗರಿಯದಂತೆಯೇ 'ಕಣ್ಣಾರೆ ಕಂಡೆನಾ ....ಕೃಷ್ಣನ' ಎಂಬ ಹಾಡೊಂದು ನನ್ನ ಬಾಯಿಂದ ಸಣ್ಣ ಧ್ವನಿಯಲ್ಲಿ ಹೊರಟಿತು. ಶಾಲಾ--ಈಗಿನ ಕಾಲದ ಪಂಡಿತರುಗಳೇ ಆಧುನಿಕರಾಗಿ ವರ್ತಿಸುತ್ತ ಪಾಶ್ಚಾತ್ಯರ ಉಡುಪು ಧರಿಸಲು 'ಪ್ಯಾಶನ್' ಆಗಿರುವಾಗ ಎಂ. ಎ. ಪದವೀಧರರಾಗಿ ಉನ್ನತ ಪದವಿಯಲ್ಲಿದ್ದಾಗ್ಯೂ ಪಂಡಿತರ ಉಡುಪಿನಲ್ಲಿ ಇವರು ಇದ್ದುದು ನನ್ನನ್ನು ಮಾತ್ರವಲ್ಲದೇ ಇಡೀ ಅಧ್ಯಾಪಕ ವೃಂದವನ್ನು ಚಕಿತಗೊಳಿಸಿತು. ತಾತ್ಪರ್ಯ ನಮ್ಮೀ ಭಾಗದಲ್ಲಿ ಈ ದರ್ಜೆಯ ಅಧಿಕಾರಿಗಳಾರೂ ಈ ಬಗೆಯ ಸರಳವಾದ ಉಡುಗೆಯನ್ನು ತೊಡುವುದಾಗಲಿ ಸಾದಾ ಜೀವನ ನಡೆಸುವುದಾಗಲಿ ಇಲ್ಲವೆಂದು ಹೇಳಬಹುದು.

ಎರಡನೆಯ ಘಂಟೆಯಲ್ಲಿಯೇ ನನ್ನ 'ಪಾಠ'ವನ್ನು ಪರೀಕ್ಷಿಸಿದರು ಆಗ ಕವಿ ಲಕ್ಷ್ಮೀಶನ ಸಂಕ್ಷಿಪ್ತ ಚರಿತ್ರೆ ಮತ್ತು ಆತನ ಜೈಮಿನಿ ಭಾರತ ಚಂದ್ರಹಾಸ ಪ್ರಕರಣ ಅಂದಿನ ವಿಷಯ ವಾಗಿದ್ದಿತು.

ಪಾಠದ ಮಧ್ಯೆ ಸುರಪುರದ (ದೇವನೂರ) ಪ್ರಸ್ತಾಪ ಬಂದಾಗ ತಮ್ಮ
ಭಾಗದಲ್ಲಿಯೂ ಆ ಹೆಸರಿನ ಊರುಂಟೆಂದು ತಿಳಿಸಿ, ಒಂದು ಘಂಟೆಕಾಲ
ರ್ತಿ ಪಾಠವನ್ನೀಕ್ಷಿಸಿ ಕೊನೆಗೆ ತರಗತಿಯನ್ನು ಬಿಟ್ಟು ಹೊರಡುವ ಮುನ್ನ
ನಂದವಾಯಿತು' ಎಂದು ಅಪ್ಪಣೆ ಕೊಡಿಸಿದರು. ನನ್ನ ಜನ್ಮ ಸಾರ್ಥಕ
ಾಯಿತೆಂದು ಕೊಂಡೆ. ಜೊತೆಗೆ, ನಾಡಿಗೇ ಸುಪರಿಚಿತರಾದ ಸುವ್ಯಕ್ತಿತ್ವ ಪಡೆ
ರುವ ನನ್ನ ಗುರು ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳವರ (ಶ್ರೀ ಸಿದ್ಧಗಂಗಾ
ಠಾಧ್ಯಕ್ಷರು) ನೆಚ್ಚಿನ ಶಿಷ್ಯನೆನಿಸಿದ ಈ ಕಿರಿಯನಿಗೆ ಈ ಅಧಿಕಾರಿಗಳು ಆ
ತಿ ಹೇಳಿದುದು ಹರಕೆಯಾದುದು ಮಾತ್ರವಲ್ಲದೆ. ಆ ಸದ್ಗುರುವಿಗೂ ಒಳ್ಳೆ
ಸರು ತಂದುಕೊಟ್ಟಿತು ಎಂಬ ತೃಪ್ತಿಯುಂಟಾಗಿ ತಣಿದೆ. ನನ್ನ ಗರುಡಿ
ೀ ಸಿದ್ಧಗಂಗಾ ಕ್ಷೇತ್ರವೆಂದು ತಿಳಿದ ಮೇಲಂತೂ ನನ್ನ ಬಗ್ಗೆ ಶ್ರೀ ಮುದಾ-
ಾಚಾರ್ಯರ ಪ್ರೀತಿ ಇನ್ನೂ ಹೆಚ್ಚಿತು.

ಅಲ್ಲಿಂದ ಸ್ವಲ್ಪ ಕಾಲದಲ್ಲಿಯೇ ನಮ್ಮ ಶಾಲೆಯ ವಿದ್ಯಾರ್ಥಿಸಂಘ
(Students' Union) ದಾಶ್ರಯದಲ್ಲಿ ಶ್ರೀಯುತರ ಉಪನ್ಯಾಸವನ್ನು
ಏರ್ಪಾಡು ಮಾಡುವ ಭಾಗ್ಯ ಉಪಾಧ್ಯಾಯ ಕಾರ್ಯದರ್ಶಿಯಾದ ನನ್ನ
ಪಾಲಿಗೆ ಬಂದಿತು. ಅಂದಿನ ವಿಷಯ 'ರಸಿಕ ಚಕ್ರಿ' ರತ್ನಾಕರನ 'ಭರತೇಶ
ವೈಭವ'ದಲ್ಲಿನ ಯುದ್ಧ ಪ್ರಸಂಗವಾಗಿದ್ದಿತು. ವಿದ್ಯಾರ್ಥಿವೃಂದ ಹಾಗೂ
ಅಧ್ಯಾಪಕರು ಭರತ ಬಾಹುಬಲಿ ಸೋದರರು ನಡೆಸಿದ ಯುದ್ಧವನ್ನು
ಪ್ರತ್ಯಕ್ಷವಾಗಿ ನೋಡಿದಂತೆ ಆನಂದಿಸಿದರು. ಅಂತೇ ಆಗಿನಿಂದಲೂ ನಡೆದ
ಅಗಣಿತ ಭೇಟಿಗಳಲ್ಲಿ ನನ್ನೊಂದಿಗೆ ಅವರಾಡಿದ ಮಾತುಗಳು, ಮಾಡಿದ ವಿಮ
ರ್ಶೆಗಳು ಎಲ್ಲವೂ ಕಾವ್ಯಮಯ, ಸರ್ವವೂ ಭಗವದರ್ಪಿತ !!

ನಮ್ಮಿಬ್ಬರ ವಸತಿಗಳು ಆಕಸ್ಮಾತ್ ಒಂದೇ ಬಡಾವಣೆಯಲ್ಲಿ (ರಾಜಾ
ಜಿನಗರ ಕೇತುಮಾರನಹಳ್ಳಿ) ರುವಂತಾದುದು ಅಘಟಿತ ಘಟನೆ. ಆದರಿಂದ
ನಮ್ಮ ಈ ಗುರು-ಶಿಷ್ಯ ಸಂಬಂಧ ಪ್ರಫುಲ್ಲಿತವಾಗಿ ಬೆಳೆಯಲನುವಾಯಿತು.
ನನ್ನ ಕೃತಿ ಹೃದಯತರಂಗಕ್ಕೆ ಅವರು ನೀಡಿರುವ ಅಭಿಪ್ರಾಯ (ನನ್ನಪಾಲಿ-
ಗೆ ಆಶೀರ್ವಚನ) ಒಂದು ಪುಟ್ಟ ಕಾವ್ಯವೇ ಸೈ. ಇನ್ನು ಮಾರನೆಯ ವರ್ಷ
ನಡೆದ ಶಾಲಾ ತನಿಖೆಯ ಕಾಲದಲ್ಲಿ ಶ್ರೀಯುತರಿಗೆ ದೇಹಾಲಸ್ಯವಾಗಿ

ಮೂರ್ಛೆ ಬಂದಂತೆ, ಆಫೀಸಿನಲ್ಲಿ ವಿಶ್ರಾಂತಿ ಪಡೆಯಬೇಕಾಗಿ ಬಂದಿತು. ಪರಿಸ್ಥಿತಿ ತಿಳಿದೊಡನೆ ಅಲ್ಲಿಗೆ ಧಾವಿಸಿ ನಾನು ಮನೆಗೆ ಹೊರಡಲು ಸೂಚಿಸಿದೆ. ಆದರೂ 'ಕರ್ತವ್ಯ' ಮುಖ್ಯವೆಂದು ಭಾವಿಸಿ ಉಳಿದಿದ್ದ ನನ್ನ ಪಾಠ ಮತ್ತು ಹಿಂದಿ ಪಂಡಿತರೊಬ್ಬರ ಪಾಠಗಳೆರಡನ್ನೂ ಮುಗಿಸಿ ಮನೆಗೆ ತೆರಳಿದರು. ಅವನ್ನು ಕಂಡ ನಮ್ಮ ಕಾಲೇಜ್ ಪ್ರಾಧ್ಯಾಪಕರೂ ಆಫೀಸಿನವರೂ ಅಚ್ಚರಿವಡೆದರು. ಇದರಿಂದ 'ಕಾಯಕವೇ ಕೈಲಾಸ' (Work is worship) ಎಂಬ ಧೀಮಾನ್ ಬಸವಣ್ಣನ ನುಡಿಯನ್ನು ಅಕ್ಷರಶಃ ಪಾಲಿಸಿದ್ದು ಗಮನಾರ್ಹವಾದುದು.

ಶ್ರೀಯುತರು ಕುಷ್ಟಗಿಯವರು ಸಜ್ಜನರು. ಅವರು ನಗು ಪ್ರಿಯ ತನ್ನಂ ರೆಯ ಜಾರಿದ 'ನಗರ' ಎಂಬುದು ಇವರ ಹೆಸರಿನ ಪೂರ್ವದಲ್ಲಿ ಬರುವುದು ಸ್ವಾಭಾವಿಕವಾಗಿಯೇ ಆಗಿದೆ.

ಅಲ್ಲಿನ ಪ್ರಸಿದ್ಧ ರನ್ನಕೇರಿಯವರಾದ ಇವರ ತಾತನವರಾದ ದಿ ವಿಷ್ಣ್ವಾಚಾರ್ಯರು ಇವರಿಗೆ ಬಾಲ್ಯದಲ್ಲಿ ಅನುಗ್ರಹಿಸಿದ ಸಂಸ್ಕೃತ ಸಾಹಿತ್ಯ ಜ್ಞಾನವೂ ಇವರ ಸಹಜ ಕವಿತಾ ಪ್ರತಿಭೆಗೆ ಪ್ರೋತ್ಸಾಹಕವಾದುವು. ಸಹಜ ಮೇಲಾಗಿ ಇವರ ಮನೆತನವೇ ಪಾಂಡಿತ್ಯಕ್ಕೆ ಹೆಸರಾದುದು. ಆ ಮನೆತನದ ಮೂಲ ಪುರುಷರಾದ ಶ್ರೀ ಪ್ರದ್ಯುಮ್ನಾಚಾರ್ಯರು ಶ್ರೀ ಶ್ರೀಮದ್ವೇದನಿಧಿ ತೀರ್ಥ ಶ್ರೀಪಾದಂಗಳವರಾಗಿ ಆ ಸೇತು ಹಿಮಾಚಲ ಪರ್ಯಂತ ತಮ್ಮ ಪಾಂಡಿತ್ಯ ಪ್ರತಿಭೆಗಳನ್ನು ಮೆರೆಸಿ ಕೀರ್ತಿ ಶೇಷರಾದವರು. ಅಂದಮೇಲೆ ಈ ಪಂಡಿತ ಮನೆತನದ ಬಗ್ಗೆ ಏನು ಹೇಳಿದರೂ ಅಲ್ಪವೇ ಸೈ.

ಶ್ರೀ ಕೃಷ್ಣಾಚಾರ್ಯರು ಮ್ಯಾಟ್ರಿಕ್ ಪಾಸಾದ ಬಳಿಕ ಬಡತನದ ದೆಸೆಯಿಂದ ಕಾಲೇಜಿನ ಅಭ್ಯಾಸಕ್ಕೆ ಸೇರಲು ಹೋಗದೆ ಮನಸ್ಸಿಲ್ಲದ ಬೇರೆಬೇರೆ ವೃತ್ತಿಗಳ ರುಚಿನೋಡಿ ಕೊನೆಗೆ ಪ್ರಿಯ ವೃತ್ತಿಯೆನಿಸಿದ ಶಿಕ್ಷಕ ವೃತ್ತಿಯನ್ನು ಸ್ವೀಕರಿಸಿಕೊಂಡರು. ಇದರಿಂದ ಇವರ ವ್ಯಾಸಂಗಕ್ಕೂ, ಸಾಹಿತ್ಯ ಸೇವೆಗೂ ಅವಕಾಶ ಲಭ್ಯವಾಗಿ ಇಂದು ಶ್ರೀಯುತರು ಎಂ. ಎ ಪದವೀಧರರಾಗಿ ಇಲಾಖೆಯ ಉನ್ನತಸ್ಥಾನಗಳಲ್ಲೊಂದನ್ನಲಂಕರಿಸಿರುತ್ತಾರೆ.

ಅಷ್ಟೇ ಅಲ್ಲದೆ ಬಾಲ್ಯದಿಂದಲೇ ಸಂಘ ಸಂಸ್ಥೆಗಳನ್ನು ಕಟ್ಟುವ, ಉತ್ಸವಾದಿಗಳನ್ನು ನಡೆಸುವ ಸಾರ್ವಜನಿಕ ಸೇವಾಕಾರ್ಯಗಳಲ್ಲಿ ಶ್ರದ್ಧಾಸಕ್ತಿಯಿಂದ ದುಡಿದು ಆ ವಿಷಯದಲ್ಲಿ ಉತ್ತಮ ಮಾರ್ಗದರ್ಶಕರಾಗಿದ್ದಾರೆ. ಇನ್ನು ಅವರಿಗೆ ಒಲಿದುಬಂದಿರುವ ಕಾವ್ಯ ಕಾಮಿನಿಯ ಒಲವಿಗೆ ಸಾಕ್ಷಿಯಾಗಿ ನಿಂತಿವೆ. ಅಮೃತಬಿಂದು (ಕವನಸಂಕಲನ), ಆದರ್ಶ (ಕಥಾಸಂಕಲನ) ಮತ್ತು ಜೀವನ ಸಂಸಾರ (ನಾಟಕ), ಈ ಕೃತಿಗಳು.

ಬಿಡುವು ದೊರೆತ ಪಕ್ಷದಲ್ಲಿ ಇವರ ಅಮೋಘ ಲೇಖನಿಯಿಂದ ಉತ್ತಮೋತ್ತಮ ಕೃತಿಗಳನ್ನು ನಿರೀಕ್ಷಿಸಲು ಸಾಧ್ಯ. ಇಂತಹ ಪೂಜ್ಯ ವ್ಯಕ್ತಿಯು ಅಧಿಕಾರದಲ್ಲಿರಲಿ, ಇಲ್ಲದಿರಲಿ, ತಮ್ಮ ಘನ ವ್ಯಕ್ತಿತ್ವದಿಂದ (Simple Living and high thinking) 'ಸರಳ ಜೀವನ. ಉನ್ನತ ಚಿಂತನ' ಎಂಬ ಉಕ್ತಿಯನ್ನು ಸಾರ್ಥಕಗೊಳಿಸುತ್ತಿರುವುದನ್ನು ನಾವೀಗಾಗಲೇ ಮನಗಂಡಿರುತ್ತೇವೆ. ಇನ್ನು ಮುಂದೆಯೂ ಇವರು ನಮ್ಮಂತಹ ಅನೇಕ ಮಂದಿ ಜಿಜ್ಞಾಸುಗಳಿಗೆ ಮಾರ್ಗದರ್ಶನ ನೀಡುತ್ತಾ ನೂರ್ಕಾಲ ಬಾಳಲೆಂದೂ ಪರಮಾತ್ಮನು ಇವರಿಗೂ ಇವರ ಕುಟುಂಬಕ್ಕೂ 'ಸಮಸ್ತ ಮಂಗಳವನ್ನುಂಟು ಮಾಡಲೆಂದೂ ಪ್ರಾರ್ಥಿಸುತ್ತೇನೆ.

ಭದ್ರಂ – ಶಿವಂ – ಮಂಗಳಂ

ಭಾವತಂತುಗಳನ್ನೆ ಮೀಟುತಿಹ ವೈಣಿಕನೆ
ಭಾವಶುದ್ಧಿಯ ಸವಿಯ ಹೊರಡಿಸಿನ್ನು!
ಸಾವನೋವನೆ ಮರೆಸು ಗಾನತಾನದಿ ಸಲಿವ
ಜೀವ ಸಾಫಲ್ಯವನೆ ಕರುಣಿಸಿನ್ನು!

— ಇಂದಿರೇಶ

'ಇಂದಿರೇಶ'

(ಶಿಕ್ಷಣ ಸಾಹಿತ್ಯಗಳ ಅಪೂರ್ವನಂಟು)

ಶ್ರೀ ಲಕ್ಷ್ಮಣ ಅಳವಂಡಿ, ಎಂ ಎ.

ನಿಜವಾಗಿ ಸಾಹಿತ್ಯ ಪ್ರೇಮಿಗಳವರೆ ಸಮಾಜವನ್ನು ಸುಧಾರಿಸಬಲ್ಲ ವ್ಯಕ್ತಿಗ ಇಬ್ಬರೆ. ಒಬ್ಬ ಸಾಹಿತಿ ಮತ್ತೊಬ್ಬ ಶಿಕ್ಷಕ. ಶಿಕ್ಷಕ ನೆಟ್ಟ ಸಮಾಜ ಸುಧಾರಣೆ ಕಲ್ಪಲತೆಗೆ ಸಾಹಿತಿ ನೀರುಣಿಸುತ್ತಾನೆ; ಹಾಲು ಹೊಯ್ಯುತ್ತಾನೆ, ಅವ ಸಿಂಚನೆ ಮಾಡುತ್ತಾನೆ. ಹೀಗೆ ಸಮಾಜ ಸುಧಾರಣೆಯ ದೃಷ್ಟಿಕೋನದಿ ನೋಡಿದಾಗ ಸಾಹಿತಿ, ಶಿಕ್ಷಕ ಇವರ ಬಾಳು ಪೂರಕ ಸಂಬಂಧ.

ಶಿಕ್ಷಣಕ್ಕೂ - ಸಾಹಿತ್ಯಕ್ಕೂ ಯಾವುದೋ ಒಂದು ಅವ್ಯಕ್ತ ಗಂ ನಂಟುತನ ಬೆಳೆದು ಬಂದಿದೆ. ಸಾಹಿತಿಯಾದವನು ಶಿಕ್ಷಕನಾಗಿರಬೇ ಅಂದಾಗ ಜನ ಜೀವನ ನೈಜಪಟ್ಟಕ್ಕಿಳಿದು ಅದರ ಆಳವನ್ನು ಗುರುತಿಸ ಸಾಹಿತ್ಯದಲ್ಲಿ ಬಾಳಿನ ಸಮ್ಯಕ್ ದರ್ಶನ ಮಾಡಿಸಬಲ್ಲ. ಅಂತೆಯೇ ಈ ಗು ಆಸೆ-ಆಕಾಂಕ್ಷೆ ಆ ಶಕ್ತಿಗಿರಬೇಕೆಂದು ತೋರುತ್ತದೆ. ಈ ವಿಷಯದ ನಿದ ಜೀರಿಯವರಲ್ಲಿ ಹೇಗೆಯೇ ಇರಲಿ. ಆದರ್ಶ ಶಿಕ್ಷಕ ಹಾಗೂ ಸಾಹಿತಿಯ ಶ್ರೀ ಸಗರರಲ್ಲಿ ನಾವು ಧಾರಾಳವಾಗಿ ನೋಡಬಹುದು. ಈ ಸತ್ಯಕ್ಕೆ ಶ್ರೀಯು ರು ಜೀವಂತ ನಿದರ್ಶನವಾಗಿದ್ದಾರೆ.

ಪಿಂಗಳನಾಮ ಶುಭ ಸಂವತ್ಸರ ಚೈತ್ರ ಶುದ್ಧ ದ್ವಾದಶಿ ಅಂದರೆ ೧೯ ಯ ಜೂನ ತಿಂಗಳಿನ ಏಳನೆಯ ದಿನ, ಶ್ರೀಯುತ ಸಗರ ಅವರು ಕಕ್ಕ (ಹೈದ್ರಾಬಾದ ಕರ್ನಾಟಕ) ದಲ್ಲಿ ಜನ್ಮವೆತ್ತಿದರು ಈ ಮಗುವನ್ನ ಯುವ ಭಾಗ್ಯಪಡೆದ ಪುಣ್ಯಶಾಲಿಗಳು ಶ್ರೀ ನರಸಿಂಹಾಚಾರ್ಯರು ಹಾ ಸೌ|| ಗಂಗಾಬಾಯಿಯವರು. ಪ್ರಾಥಮಿಕ ವಿದ್ಯಾಭ್ಯಾಸವನ್ನು ಬಹಿರಾ

ರಾವದಿಗ) ದಲ್ಲೂ ಮಾಧ್ಯಮಿಕ ಅಭ್ಯಾಸವನ್ನು ಶಹಪುರದಲ್ಲೂ ಕಲ್ಬುರ್ಗಿ
ು ನೂತನ ವಿದ್ಯಾಲಯದಲ್ಲಿ ಪ್ರೌಢಶಿಕ್ಷಣ ಪಡೆಯುತ್ತಿರುವಾಗಲೇ ಹದಿನೆಂಟ
ಹರೆಯದ ಶ್ರೀ ಸಗರರು ಶಿಕ್ಷಕರಾಗುವ ಕನಸುಕಂಡರು. ಇದು ಅವರಿಗೆ
ಮುಗಿಲು ಮಲ್ಲಿಗೆ" ಯಾಗಿರಲಿಲ್ಲ. 'ಅಂಗೈನೆಲ್ಲಿ'ಯಾಗಿತ್ತು. ಅಂತೆಯೇ
೯೩೮ ರಲ್ಲಿ ಜಿಲ್ಲಾ ಕಲೆಕ್ಟರ್‌ರವರ ಕಚೇರಿಯ ಅಬಕಾರಿ ಖಾತೆಯಲ್ಲಿ ಕೆಲ
ಮಾಡುತ್ತಿರುವ ಇವರು ಆವೃತ್ತಿಯನ್ನು ಸ್ವಸಂತೋಷದಿಂದ ತ್ಯಜಿಸಿ, ಕಡಿ
ಮೆ ಸಂಬಳದ ಏಕಶಿಕ್ಷಕ ಶಾಲೆಯಲ್ಲಿ ಉಪಾಧ್ಯಾಯ ವೃತ್ತಿಯನ್ನು ಕೈಕೊಂಡ
ು. ಇದು ಅವರಿಗೆ ಕೇವಲ ಉಪಜೀವನದ ಮಾಧ್ಯಮವಾಗಿರಲಿಲ್ಲ, ಪರಮ
ಪಾವನವಾದ ಕರ್ತವ್ಯವಾಗಿದ್ದಿತು. ಜೀವಿತದ ಸರ್ವಸ್ವವಾಗಿದ್ದಿತು.

ಅಂದು ಹೈದರಾಬಾದ ನಾಣ್ಯ ಹಾಲಿ ೧೫ ಅನ್ನು ತಿಂಗಳ ಸಂಬಳ
ವಾಗಿ ಪಡೆದು ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದ ಶ್ರೀಯುತರು ಇಂದು ತಿಂಗ
ಳಗೆ ಸುಮಾರು ೫೦೦ ರೂ. ಪಡೆಯುವ ಸಿರಿಗನ್ನಡನುಡಿಯ ವೀಕ್ಷಣಾಧಿಕಾರಿ
ಗಳಾಗಿದ್ದಾರೆ. ಅಲ್ಲಾವುದ್ದೀನನ ಅದ್ಭುತ ದೀಪದ ಮಾಯಾ ಪ್ರಸಂಗ ಇದಲ್ಲ.
ಇದರ ಹಿಂದೆ ಸುದೀರ್ಘವಾದ ಕಾಲು ಶತಮಾನದ ಪರಿಶ್ರಮ ಹಾಗೂ ಸಾಧನೆ
ಯ ಐತಿಹ್ಯವಿದೆ. ಶಿಕ್ಷಕರಾಗಿಯೇ ವಿದ್ಯಾರ್ಥಿಗಳಾಗಿದ್ದ ವಿಲಕ್ಷಣ ವ್ಯಕ್ತಿತ್ವ
ಇವರದು. ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದ ಬಿ. ಎ, ಪದವಿ
ಯನ್ನು ಪಡೆದರೂ ಇವರ ಜ್ಞಾನ ತೃಷೆ ಹಿಂಗಲಿಲ್ಲ; ಅದರ ಫಲವಾಗಿ ಎಂ ಎ,
ಪದವಿಯೂ ಬಿ. ಇಡಿ, ಪದವಿಯೂ ಇವರನ್ನು ಅನುಸರಿಸಿಕೊಂಡೇ ಬಂದಿತು
ದೀರ್ಘಕಾಲದ ಈ ಪರಿಶ್ರಮದ ಅವಧಿಯಲ್ಲಿ ಸುಪ್ತವಾಗಿದ್ದ ಸಾಹಿತ್ಯವಾಹಿನಿ
ಇವರ ಹೃದಯದಲ್ಲಿ ಬತ್ತದ ತೊರೆಯಾಯಿತು.

ಸಾಹಿತ್ಯಕೃಷಿ :-

'ಸಾಹಿತ್ಯ' ಎಂದೊಡನೆಯೇ ನೆನಪಿನ ಪಕ್ಷಿ ೧೯೪೫ ಕ್ಕೆ ಓಡುತ್ತದೆ.
ಅದೇ ವರ್ಷ ಶಿಕ್ಷಕರಾಗಿರುವ ಸಗರರು ಸ. ನ. ಕೃ, ಹಾಗೂ ಕವಿ 'ಇಂದಿರೇಶ'
ಕಾಗಿದ್ದುದು. ಇವರ ಹೃದಯದಲ್ಲಿಯ ಸಾಹಿತ್ಯ ಶಕ್ತಿ ಗುಪ್ತಗಾಮಿನಿ ಯಾಗಿ

ಯೇ ಉಳಿಯಲಿಲ್ಲ. ಮಹಾಪೂರ ಬಂದು ಕೊಚ್ಚಿಹೋಯಿತು ಅವರ ವಾಗಿಯೇ 'ಜೀವನ ಸಂಸಾರ' ನಾಟಕ ಕನ್ನಡ ಪುಲಿಕೇಶಿಯು ಮ ಸೇರಿತು. ಅದಾದ ಸುಮಾರು ಇಪ್ಪತ್ತೈದು ವರ್ಷಗಳವರೆಗೆ ಶ್ರೀಯುತರ ನಗೆಯು 'ಜಯಂತಿ' 'ಜೀವನ' 'ಕರ್ನಾಟಕ ವೈಭವ' 'ಕನ್ನಡನುಡಿ' ಮುಂದ ಪತ್ರಿಕೆಗಳ ಪುಟಗಳನ್ನಲಂಕರಿಸಿದವು. 'ಕನ್ನಡದ ದೀಪ ಕಾಣುತಿರುವದು' ಎಂದು ಕವಿ ಅಖಂಡ ಕರ್ನಾಟಕತ್ವದ ಕನಸು ಕಂಡಿ ಲೇಖನಿಯ ಮೂಲಕ ಇಂದು ಆ ಕನಸೇ ನಮ್ಮೆಲ್ಲರ ನನಸಾಗಿದೆ. ೧೯೬೦ [illegible]ರ 'ಅಮೃತಬಿಂದು' ಇವರ ಸಂಕಲನ 'ಆದರ್ಶ' ಕಥಾಸಂ ಬೆಳಕು ಕಂಡವು. ಅವರ ಅಸಂಖ್ಯಾತ ಲೇಖನಗಳ ಪೈಕಿ ಈ ಮ ಕೃತಿಗಳು ಉತ್ತಮ ನಿದರ್ಶನ.

ಕೃತಿವಿಶೇಷ:-

ಅವರ ಕೃತಿಗಳು ಏತಕ್ಕೆ 'ನಿದರ್ಶನ' ಎಂದರೆ ಹಿರಿಗನ್ನಡ ಸಂಸ್ಕೃತಿ, ಗ್ರಾಮೀಣ ಪ್ರಾದೇಶಿಕ ಭಾಷೆಗಳ ಉಡುಪನ್ನಿಟ್ಟು ಅಲಂಕರಿಸಿದರೆ ಹೇ ಎಂಬುದಕ್ಕೆ! ಶ್ರೀ. ನಗರರು ಮಾಡಿದ ಕೆಲಸವೇ ಅದು. ಸಾಹಿತ್ಯದಲ್ಲಿ ಮಾಸ್ತಿ ತುಂಬಿ ತಿಳಿಸುವ ಶ್ರೀಯುತರು ತಮ್ಮ ಜೀವನದ ಅನುಭವ ರಸ ದೊಂದಿಗೆ ಉತ್ತರ ಕನ್ನಡನುಡಿಯ ಸೊಬಗಿನ ಪರಿಚಯ[illegible] ಜೀವನ ಸಂಸಾರ ನಾಟಕವನ್ನು ನಿಜವಾದ ಸಂಸಾರದರ್ಪಣವನ್ನಾಗಿ ಮಾಡಿ ಅವರ ಸಾಹಿತ್ಯ ಶಕ್ತಿಯ ಅಳತೆಗೋಲಾಗಿ ಈ ಕೃತಿ [illegible] ಕ್ಕೆ ಸಿದ್ಧವಾಗಿದೆ.

ಸಂಘಟನಾಚತುರ:-

ಶ್ರೀಯುತ ನಗರರು ಬರಿಯ ಅವರ ವಿದ್ಯಾರ್ಥಿಗಳಿಗೆ ನುರಿತ ಬರಹಗಾರರಷ್ಟೇ ಅಲ್ಲ. ಉತ್ತಮ ಸಂಘಟಕರೂ ಕೂಡ! ಬಾಳಿನ ಪ್ರತಿವರ್ಷವೂ ಒಂದೊಂದು ಸಂಘಟನೆಗಳ ರೂವಾರಿ ಸ್ಪ ತೋರಿಸಿದೆ. ಎಳೆತನದಲ್ಲಿ ಶಿಕ್ಷಣ ಇವರ ಪ್ರಯೋಗ ಶಾಲೆಯಾಗಿ

ಳಿಯ ಗೆಳೆಯರನ್ನು ಕೂಡಿಸಿ ಶ್ರೀ ಸೇವಾ ಗ್ರಂಥಾಲಯ ವಾಚನಾಲಯವನ್ನು ಸ್ಥಾಪಿಸಿದರು. ತನ್ಮೂಲಕ ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿಯ ಪುನರುಜ್ಜೀವನದ ಕಾರ್ಯವನ್ನು ಕೈಕೊಂಡರು. ಆ ಊರಲ್ಲಿ ನಾಡಹಬ್ಬದ ಆಚರಣೆಯನ್ನು ೩೦ ವರ್ಷಗಳ ಹಿಂದೆಯೇ ಮಾಡಿದ್ದರು. ಇದು ಇಂದಿಗೂ ಅನಾವ್ಯಹತವಾಗಿ ನಡೆದು ಬರುತ್ತಿದೆ. ಹರೆಯದ ಹುಮ್ಮಸ್ಸು ಪಕ್ವವಾದಾಗ ರಂಗಂಪೇಟೆ ಇವರ ಸಾಂಸ್ಕೃತಿಕ ಚಟುವಟಿಕೆಯ ಕೇಂದ್ರವಾಯಿತು. ಅಲ್ಲಿನ ತರುಣರಿಗೆ ಕನ್ನಡದ ದೀಕ್ಷೆಯನ್ನಿತ್ತು, ಮನೆ ಮನೆಯಲ್ಲೂ ಕನ್ನಡದ ನಂದಾದೀಪವನ್ನು ಬೆಳಗಿಸಿದರು.

ಇಂದಿಗೂ ಅಲ್ಲಿನ ಕನ್ನಡ ಸಾಹಿತ್ಯ ಸಂಘ ಮತ್ತು ಸಾರ್ವಜನಿಕ ಸಾಹಿತ್ಯ ಮಂದಿರ ಈ ಸಂಸ್ಥೆಗಳು ಇದರ ಕರ್ತೃತ್ವ ಶಕ್ತಿಯ ನಿದರ್ಶನಗಳಾಗಿ ನಿಂತಿವೆ. ಹತ್ತಿರವಾಯ, ಯಾಳಗಿ ಇದರ ಕಾರ್ಯಕ್ಷೇತ್ರವಾಯಿತು. ಯಾಳಗಿಯಲ್ಲಿ ಇವರು ಸಂಘಟಿಸಿದ ಸಮ್ಮೇಳನದ ಇತಿಹಾಸ ಅಲ್ಲಿಯ ವೃದ್ಧರಿಗೆ ಮಧುರ ಸ್ಮೃತಿಯಾಗಿದೆ ತರುಣ ಪೀಳಿಗೆಗೆ ಒಂದು ಆದರ್ಶ ಕಾರ್ಯಸಾಧನೆಗೆ ಕರೆಯಾಗಿದೆ.

೧೯೫೨ ರಲ್ಲಿಯೂ ಹಾಗೂ ೧೯೫೫ ರಲ್ಲಿಯೂ ರಂಗಂಪೇಟೆ ಮತ್ತು ಯಾಳಗಿಯಲ್ಲಿ ವೈಭವ ಪೂರಿತವಾಗಿ ನಡೆಸಿದ ಮಕ್ಕಳ ಸಮ್ಮೇಳನಗಳಂತೂ ಅವರದೇ ಆದ ಹೊಸರೀತಿಯ ಸಮ್ಮೇಳನಗಳೆಂದು ಧಾರ್ಷ್ಟ್ಯದಿಂದ ಹೇಳಬಹುದು. ಈ ಸಮ್ಮೇಳನಗಳು ಅಂದಿನ ಎಳೆಯರನ್ನು ಇಂದಿನ ನಾಡೊಡೆಯರನ್ನಾಗಿಸುವ ಮಹಾಕಾರ್ಯಕ್ಕೆ ನಾಂದಿಯಾಯಿತು. ಈ ಮಧ್ಯೆ ೧೯೫೫ ರಲ್ಲಿ ಸುರಪುರ ತಾಲೂಕಿನ ಯಾಳಗಿಯಲ್ಲಿ ಹೈದರಾಬಾದು ಕರ್ನಾಟಕ ಸಾಹಿತ್ಯ ಸಮ್ಮೇಳನವನ್ನು ಸಂಘಟಿಸಿದರು. ಪರಸ್ಪರ ಅಂತಃಕಲಹಗಳು, ಸಮ್ಮೇಳನದಲ್ಲಿ ಗೌರವಿಸಬೇಕಾದ ವ್ಯಕ್ತಿಯ ಬಗ್ಗೆ ಇದ್ದ ದ್ವೇಷಾಸೂಯೆಗಳು ಶ್ರೀ ಸಗರ ಅವರ ಪ್ರಾಣಕ್ಕೆ ಅಪಾಯ ತರುವಂತಾದರೂ ಇವರು ಅಂಜಲಿಲ್ಲ. ಎದೆಯನ್ನು ವಜ್ರವನ್ನಾಗಿಸಿ ಕೊಂಡರು. ಈ ದೈವೀ ಅಂತಃಶಕ್ತಿಗೆ ಕೊನೆಗೂ ಪಾಶವೀ ಶಕ್ತಿ ಮಣಿಯಿತು. ಈ ಸಾಹಸದ ಶರಧಿಯ ಮಥನದಲ್ಲಿ ವಿಷದೊಂದಿಗೆ ಅಮೃತವೂ

ಲಭ್ಯವಾಯಿತು. ಬರಿಯ ನಗರ ಅವರಿಗಷ್ಟೇ ಅಲ್ಲ; ಕನ್ನಡ ಕುಲಕೋಟಿಗೆ ಸಹ.

ಅವರ ದೃಷ್ಟಿ:-

ಇಂದು ಆ ವ್ಯಕ್ತಿ ಶಿಥಿಲವಾಗಿದ್ದಾರೆ ನಿಜ. ಆದರೆ ಆ ಅಮೋಘ ವ್ಯಕ್ತಿತ್ವ? ಕಾಲ ಅವರ ಭೌತಿಕ ದೇಹದ ಮೇಲೆ ತನ್ನ ವಿಜಯ ಮುದ್ರೆಯನೊತ್ತಿದೆ. ಆದರೆ ಅಂತಃ ಸತ್ವ-ಆತ್ಮಶಕ್ತಿ-ಛಲ, ಕಾಲನ ಪಾಶಕ್ಕೆ ಗುರಿಯಾಗಿಲ್ಲ, ಗುರಿಯಾಗುವುದೂ ಇಲ್ಲ.

ಈಗ ಬೆಂಗಳೂರಿನ "ವಾಗ್ವಿಲಾಸ ಪ್ರಕಾಶನ ಸಂಸ್ಥೆಯ" ಅಧ್ಯಕ್ಷರಾಗಿದ್ದಾರೆ. ಮೊನ್ನೆ ತಾನೇ ಕನ್ನಡ ನಾಡು ನುಡಿಗೊಂಡು ಹೊನ್ನ ಕಾಣಿಕೆ ನೀಡಿದ್ದಾರೆ. ಪ್ರಾಚೀನ-ಅರ್ವಾಚೀನ ಕವಿಗಳನ್ನು ಒಗ್ಗೂಡಿಸಿ ಸಾಹಿತ್ಯದ ಭಾವೈಕ್ಯ ಸಾಧಿಸಿದ್ದಾರೆ. ತಮ್ಮ ಪ್ರಧಾನ ಸಂಪಾದಕತ್ವದಲ್ಲಿ "ಕನ್ನಡ ಕವಿ ಕಾವ್ಯ ದರ್ಶನ"ವನ್ನು ಮಾಡಿಸಿದ್ದಾರೆ. ಈ ಸುಸಂಘಟಿತ ಕಾರ್ಯವನ್ನು ಡಾ. ಮಾಸ್ತಿ ಅವರೇ ಹಾಡಿ-ಹೊಗಳಿ ಹರಿಸಿದ್ದಾರೆ. ಅವಿರತವಾಗಿ ದುಡಿಯುತ್ತಿರುವ ಈ ಕರ್ಮಯೋಗಿಗಳು, ಜೀವನದ ಬಗೆಗೆ ತಳೆದಿದ್ದ ದೃಷ್ಟಿಯೂ ಕನಸಿನಿಂದ ಕೂಡಿದೆ.

ಅವರ ಉದಾತ್ತ ದರ್ಶನ, ಹಾರೈಕೆ!

"ಜನ ಜೀವನವು ಪರಿಶುದ್ಧವೂ ಉದಾತ್ತವೂ ಆಗುವವರೆಗೆ ಜೀವನ ಸೌಂದರ್ಯವಿಲ್ಲ. ಸೌಂದರ್ಯವಿಲ್ಲದಾಗ ಶುಭವನ್ನರಸುವುದೂ ಹಾಸ್ಯಾಸ್ಪದ. ಶಿವ-ಸೌಂದರ್ಯಗಳ ಅಭಾವ ಅಖಂಡ ಬ್ರಹ್ಮಾಂಡದಲ್ಲಿ ಗೋಚರವಾಗುತ್ತಿರುವಾಗ ಸತ್ಯದ ದರ್ಶನ ಹೇಗೆ ಸಾಧ್ಯ? ವಿಜ್ಞಾನದ ಹುಚ್ಚುಮುಚ್ಚು ಹರಿದು ತತ್ತ್ವಜ್ಞಾನದ ನಿಚ್ಚಳ ಬೆಳಕು ಒಳಗೂ ಹೊರಗೂ ಪಸರಿಸಿದಾಗ ಜೀವನಜ್ಯೋತಿ ಬೆಳಗುತ್ತದೆ. ಅದು ನಂದಾದೀಪವಾದಾಗಿ ಎಲ್ಲೆಲ್ಲೂ ಸೌಂದರ್ಯದ ಆಧಿಕ್ಯವಾಗಿ ಬಾಳು ಶಿವಮಯವಾಗುತ್ತದೆ. ಸೌಂದರ್ಯದ ಸಾಕ್ಷಾತ್ಕಾರ

ಹೊಂದುತ್ತದೆ ಅಂಥ ಸಮಯ ತೀರ ಸನ್ನಿಹಿತವಾಗಲಿ! " ಎಂಬುದೇ ನನ್ನ ಹಾರೈಕೆ. ಅವರ ಈ ಹಾರೈಕೆಯನ್ನು ಇಂದಿನ ಪೀಳಿಗೆಯ ಲೇಖಕರು ತಮ್ಮ ಸಾಹಿತ್ಯ ಸೇವೆಯ ಮುಖಾಂತರ ಕೃತಿರೂಪದಲ್ಲಿ ತಂದರೆ ನಾನು ಕೃತಾರ್ಥ.

ಅವರ ಸಂದೇಶ:-

ನಾಡಿನ ಇಂದಿನ ಪೀಳಿಗೆಗೆ ಅವರು ಹೇಳದ ಕಳಕಳಿಯ ಮಾತಿದು. "ಮನಃಪೂರ್ವಕ ಅಭ್ಯಾಸಮಾಡಿ, ವಿಷಯದಲ್ಲಿ ಪರಿಪೂರ್ಣರಾಗಿ, ಜೀವನದ ನೆಲೆ-ಬೆಲೆ, ಮೌಲ್ಯಗಳನ್ನು ಕಂಡು ಕೊಳ್ಳಿರಿ. ಕಂಡುಕೊಂಡ ಆದರ್ಶವನ್ನು ಇತರ ಸಹೃದಯರಿಗೂ ಉಣ ಬಡಿಸಿರಿ. "

ಈ ವ್ಯಕ್ತಿ ನಮ್ಮೊಂದಿಗೆ ನೂರು ಕಾಲ ಬಾಳಲಿ ! ಅವರ ಮಾರ್ಗದರ್ಶನದಲ್ಲಿ ನಡೆಯುವ ಭಾಗ್ಯ ಕಂನಾಡ ಕಿರಿಯರದಾಗಲಿ !

ನಿನ್ನ ನಸುನಗೆಯೊಂದೆ ಎನಗಿರುವ ಆಧಾರ -
ವದರ ಬಲದಿಂದೆಲ್ಲ ಕಹಿಗಳಳಿದು.
ಸಮಚಿತ್ತ ಸಾಧಿಸಲು ಹೊರಟಿರುವೆ; ನಿನ್ನಿಂದ
ಪಡೆವ ಭಾಗ್ಯವಿದೊಂದೆ ಆಗಬಹುದು !

ಇಂದಿರೇಶ -

ಶ್ರೀ ಸಗರ ಕೃಷ್ಣಾಚಾರ್ಯರ

ಯಾವುದೇ ಭಾಷೆಯು ಸರಿಯಾದ ಬೆಳವಣಿಗೆಯನ್ನು ಹೊಂದಬೇಕಾದರೆ, ವಿವಿಧ ಸಾಹಿತ್ಯದ ವಿಕಾಸವಾಗಬೇಕಾದರೆ, ಆಯಾ ಭಾಷಾಸಾಹಿತ್ಯದ ಸರಿಯಾದ ಜ್ಞಾನವಾಗಬೇಕಾದರೆ ನುರಿತ ಸಾಹಿತಿಗಳು ವಿದ್ವಾಂಸರು ವಿಮರ್ಶಕರು ಅನುಭವಿ ಲೇಖಕರು ಕಾರಣರಾಗುತ್ತಾರೆ. ಸಾಹಿತಿಗಳ ಕೊರತೆಯೆ ಇದ್ದ ಈ ಉತ್ತರ ಕನ್ನಡದ ಕಲಬುರ್ಗಿ ಜಿಲ್ಲೆಯಲ್ಲಿ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಸೇವೆಸಲ್ಲಿಸುತ್ತಿರುವ ಹಿರಿಯ ಸಾಹಿತಿಗಳಾಗಿರುವ 'ಸಗರ' ಅವರು ಜನಿಸಿದ್ದು ನಮ್ಮ ಪುಣ್ಯವೇ ಸರಿ.

ಇತ್ತೀತ್ತಲಾಗಿ ಕನ್ನಡದ ಕೂಗೂ ಮೊಳಗತೊಡಗಿ, ಇದರ ಬೆಳವಣಿಗೆ ಜೊತೆಗೆ ಸಾಹಿತ್ಯ ಕೃತಿಯಾಗ ತೊಡಗಿದ್ದು ಇಂಥಹ ಅನೇಕರ ಪ್ರಯತ್ನ ಹಾಗೂ ಕನ್ನಡಿಗರಲ್ಲಿಯ ಒಲವು ಅಭಿಮಾನಗಳಿಂದ ಎಂದರೆ ತಪ್ಪಾಗಲಿಕ್ಕಿಲ್ಲ.

ಕಲಬುರಗಿ ಜಿಲ್ಲೆಯ ಪ್ರಮುಖ ಸಾಹಿತಿಗಳಲ್ಲಿ ಒಬ್ಬರಾದ ಇವರು ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆ ವಿವಿಧಮುಖವಾದದ್ದು. ಇವರು 'ಪಿಂಗಳ ನಾಮ' ಸಂವತ್ಸರದಲ್ಲಿ ಅಂದರೆ ಏಳನೇ ಜೂನ 1917 ರಲ್ಲಿ ಜನಿಸಿದರು. ಇವರು ಕಲಬುರಗಿ ಜಿಲ್ಲೆಯ ಶಹಪುರದವರು.

ಸಾಹಿತ್ಯರಚನೆಗೆ, ಅಭ್ಯಾಸ, ಅವಶ್ಯ ಅನ್ನುವವನ್ನು ಹಿಂದಿನ ಆಲಂಕಾರಿಕರು ಹೇಳಿದ್ದಾರೆ ಸಹಜ. ಅಂಥ ಅಭ್ಯಾಸವನ್ನು ಇವರು ತಮ್ಮ ಎಂ. ಎ. ಪದವಿ ಪರೀಕ್ಷೆಯನ್ನು ಪಡೆಯುವಲ್ಲಿ ಮಾಡಿದ್ದಾರೆ ಜೊತೆಗೆ ವೃತ್ತಿ ಶಿಕ್ಷಣ ತರಬೇತಿ ಪಡೆದು "ಬಿ.ಇಡಿ" ಮಾಡಿದ ಇವರು ಆ ಶಿಕ್ಷಕರಾಗಿ [illegible] ಹೆಚ್ಚಿನ ಅನುಭವವನ್ನು, ಅವರು ಶೈಕ್ಷಣಿಕ ಕ್ಷೇತ್ರದ ಕ್ರಿಯೆಯೊಂದು [illegible] ಸೇವೆಸಲ್ಲಿಸುತ್ತಿರುವಾಗ ಪಡೆದಿರಬಹುದು [illegible] ಎನಿಸುತ್ತದೆ.

ಶಿಕ್ಷಕೋಪಾಧ್ಯಾಯರಾಗಿ ಅಧ್ಯಾಪಕರಾಗಿ ನಂತರ ಪ್ರೌಢ ಮಾಧ್ಯಮಿಕ ಶಾಲೆಗಳಿಗೆ ಮುಖ್ಯೋಪಾಧ್ಯಾಯರಾಗಿದ್ದರು [illegible]

ಷ್ಟೂ ಆಗಿ ಅಲ್ಲಿಯ ಕುಂದುಕೊರತೆ-ಕಷ್ಟನಷ್ಟಗಳನ್ನು ತಿಳಿದು ಪರಿಹಾರೋಪಾಯಗಳ ಬಗ್ಗೆ ತಮ್ಮನೇ ಆದ ಕೆಲವು ಸಲಹೆಗಳನ್ನು ನೀಡಿ ಉಪಕರಿಸಿದ್ದಾರೆ. ನಮ್ಮ ಈ "ಶಿಕ್ಷಣ ಮಹಾವಿದ್ಯಾಲಯ"ದಲ್ಲಿ ಪ್ರಾಧ್ಯಾಪಕರಾಗಿ ತುಮಕೂರದ 'ಸಿರಿಗುರು ಮಹಾವಿದ್ಯಾಲಯ'ದಲ್ಲಿ ಆಚಾರ್ಯರಾಗಿ ಸಧ್ಯದ ಅಲ್ಲಿಯೇ ಪ್ರಾಚಾರ್ಯರಾಗಿ ಸೇವೆಸಲ್ಲಿಸಿದ್ದಾರೆ.

ತಮ್ಮ ನಿತ್ಯಜೀವನದ ವೃತ್ತಿಯಲ್ಲಿ ಪರೋಕ್ಷವಾಗಿ, ಪ್ರತ್ಯಕ್ಷವಾಗಿ ಸೇವೆಸಲ್ಲಿಸಿದ್ದಲ್ಲದೆ ಅವರ 'ಜೀವನ' ಎಂದರೆ 'ಸಾಹಿತ್ಯ' ಎನ್ನುವಷ್ಟು ಅದರಲ್ಲಿ ಬೆರೆತು ಒಂದಾಗಿದ್ದಾರೆ.

ಇವರ "ಅಮೃತಬಿಂದು" ಎಂಬ ಕವನ ಸಂಗ್ರಹ ಶಹಪುರದ 'ವೇಣುಗೋಪಾಲ' ವಾಚನಾಲಯದಿಂದ ಪ್ರಕಾಶಗೊಂಡಿದೆ; ರಂಗಂಪೇಟೆಯ ಸಾರ್ವಜನಿಕ ಸಾಹಿತ್ಯ ಸಂಘದವರಿಂದ ಅವರ "ಕಥಾಸಂಕಲನ"ವು ಬೆಳಕು ಕಂಡಿದೆ. "ಜೀವನ ಸಂಸಾರ" ಎಂಬುದು ಇವರ ಹಾಸ್ಯಭರಿತ ಏಕಾಂಕ ನಾಟಕ.

ಕನ್ನಡ ಕವಿ ಕಾವ್ಯದರ್ಶನ; ಬಾಲನಂದನ; ನಾಲ್ಕು ಕಾವ್ಯ ಕಥೆಗಳು ಮಧುರ ಮಿಲನ, ಕವನ ಕುಸುಮ ಮುಂತಾದವು ಇವರು ಸಂಪಾದಿಸಿ ಪ್ರಕಟಗೊಂಡ ಕೃತಿಗಳು.

ಸ್ವಂತ ಸಾಹಿತ್ಯಿಕ ಪತ್ರಿಕೆ ಮಂದಾಕಿನಿಯನ್ನು ಹೊರಡಿಸಿ ಅನೇಕ ಲೇಖಕರಿಗೆ ಪ್ರೋತ್ಸಾಹಿಸಿ, ಬರೆಯುವ ಅವಕಾಶಗಳನ್ನೊದಗಿಸಿ ಅವುಗಳನ್ನು ತಿದ್ದಿ ಪ್ರಕಟಿಸಿ ಕನ್ನಡಕ್ಕೆ ನೀಡುತ್ತಿದ್ದಾರೆ. ಇದೊಂದು ಮಹತ್ಸಾಧನೆಯೇ ಸರಿ,

ಜಯಂತಿ; ಜೀವನ; ಕನ್ನಡನುಡಿ; ಕರ್ನಾಟಕ ವೈಭವ; ಪ್ರಸಾದ; ಸಿದ್ಧಗಂಗಾ, ಸಾರಥಿ, ಪ್ರಕಾಶ, ಅಮರವಾಣಿ ಮುಂತಾದವುಗಳಲ್ಲಿ ಇವರ ನೂರಾರು ಲೇಖನಗಳು, ಕತೆ-ಕವಿತೆಗಳು, ಹರಟೆ ವಿಮರ್ಶಾತ್ಮಕ ಪ್ರಬಂಧಗಳು ಪ್ರಕಟಗೊಂಡಿವೆ.

ಇವರ ಸಾಹಿತ್ಯ ಸೇವೆ ಕನ್ನಡಕ್ಕಷ್ಟೇ ಅಲ್ಲ ಬೇರೆಭಾಷೆಗಳಿಗೂ ದೊರೆತಿವೆ. "ಹಕೀಕಿ ಮುಸಾವಾತ್" ಎಂಬ ಪ್ರಬಂಧವೊಂದು ಪುಸ್ತಕರೂಪದಲ್ಲಿ ಉರ್ದುವಿನಲ್ಲಿ ಪ್ರಕಟವಾಗಿದೆ. "ಮಹಾಕವಿ" ಎಂಬ ನಾಟಕವೊಂದು ಸಧ್ಯದಲ್ಲಿಯೇ ಉರ್ದುವಿನಲ್ಲಿ ಪ್ರಕಟವಾಗಲಿದ್ದು ಅನೇಕ ಉರ್ದುಲೇಖಗಳು ಪ್ರಕಟವಾಗಿವೆ.

ಶ್ರೀಷ್ಠ ಸಾಹಿತಿಗಳೂ, ವಿಮರ್ಶಕರೂ ಆದ ಇವರು ವಾಗ್ಮಿಗಳ
ಅಹುದು. ಕಲಬುರಗಿಯ ಆಕಾಶವಾಣಿ ನಿಲಯದಿಂದ ಇವರ 'ವಿಚಾರದೀಪಿ
ಗಳು ಬಿತ್ತರಗೊಳ್ಳುತ್ತಿವೆ; ಇವರ "ತಾಯಿ ಭಾರತಿ" ಎಂಬ ಕವನ "ವಗ
ವಂದನೆ"ಯ ರೂಪದಲ್ಲಿ ಪ್ರಸಾರವಾಗುತ್ತಿದೆ. ಅಲ್ಲದೇ ಅನೇಕ ಉದ
ಹಾಗೂ ಕನ್ನಡ ಭಾಷಣಗಳು ಪ್ರಸಾರವಾಗಿವೆ

ಕನ್ನಡ ಸಾಹಿತ್ಯಕ್ಕೆ ಸೇವೆ ಸಲ್ಲಿಸುತ್ತಿರುವ ಇವರು, ಹಿರಿಯರಿಂದಲ
ಸಾಹಿತ್ಯ ಸೇವೆಗೆ ಅನುಕೂಲವಾಗುವಂತೆ ಅನೇಕ ಸಂಘ ಸಂಸ್ಥೆಗಳ
ಸ್ಥಾಪಿಸಿದ್ದಾರೆ.

ಶಹಪುರದಲ್ಲಿ ಶ್ರೀ ವೇಣುಗೋಪಾಲ ವಾಚನಾಲಯವನ್ನು', 'ಕನ್ನ
ಸಾಹಿತ್ಯ ಸಂಘ-ರಂಗಂಪೇಟೆ, ಸಾರ್ವಜನಿಕ ಸಾಹಿತ್ಯಮಂದಿರ, ರಂಗಂಪೇ
ವಾಗ್ವಿಲಾಸ ಪ್ರಕಾಶನ ಬೆಂಗಳೂರು ಮುಂತಾದ ಗ್ರಂಥಗಳನ್ನು ಕಟ್ಟಿ ಬೆಳೆಸಿ ಕನ್ನ
ಸಾಹಿತ್ಯ ಪ್ರಸಾರದ ಕಾರ್ಯವನ್ನು ಕೈಕೊಂಡಿದ್ದಾರೆ.

ಲೇಖಕರಾಗಿ, ಸಂಪಾದಕರಾಗಿ, ಕವಿಗಳಾಗಿ, ನಾಟಕಕಾರರಾಗಿ, ವಿ
ರ್ಶಕರಾಗಿ ಸಾಹಿತ್ಯಕ್ಷೇತ್ರದಲ್ಲಿ ಸೇವೆಸಲ್ಲಿಸಿದ ಇವರ ಕೊಡುಗೆ ಕನ್ನಡಕ್ಕೆ
ಅಪಾರ.

ಕಲಬುರಗಿ ಜಿಲ್ಲೆಯಲ್ಲಿ ಕನ್ನಡದ ದೀಪ ಬೆಳಗುವಂತೆ ಶ್ರಮಿಸುತ್ತಿರು
ಇವರ ಕಾರ್ಯ ಶ್ಲಾಘನೀಯವಾದದ್ದು. ಇವರಿಂದ ಇನ್ನೂ ಸಾಹಿತ್ಯಸೇ
ಯಾಗಲಿ ಕನ್ನಡಕ್ಕಷ್ಟೇ ಅಲ್ಲ ಉಳಿದ ಭಾಷಾ ಸಾಹಿತ್ಯಕ್ಕೂ ದೊರೆಯ
ಕನ್ನಡ ಮತ್ತಷ್ಟು ಶ್ರೀಮಂತವಾಗಲಿ. ಆ ಶಕ್ತಿ ಕನ್ನಡಾಂಬೆ ಅವರಿಗೆ ನೀಡ
ಇದು ನಮ್ಮ ಮೊರೆ

ಕಮಲಾಕ್ಷಿ ದಾಗಿಲುಕೋಟಿ ಎಂ. ಎ.

(ಬಿ. ಇಡಿ. ವಿದ್ಯಾರ್ಥಿನಿ)

ಶ್ರೀ ಸಗರ ಆಚಾರ್ಯರನ್ನು ನಾನು ಕಂಡಂತೆ

****

ಕನ್ನಡ ನಾಡಿನಲ್ಲಿ ಸಗರನಾಡು ಗಂಡುಮೆಟ್ಟಿನ ಪ್ರದೇಶ. ಅಲ್ಲಿಯ ಜನರು ಗಟ್ಟಿಗರು. ಮೇಧಾವಿಗಳು. ನಾಡನುಡಿಯ ಅಭಿಮಾನಿಗಳು. ಧರ್ಮ ಧುರಂಧರರು. ಸ್ವಧರ್ಮದಲ್ಲಿ ನಿಷ್ಠೆ ಪರಧರ್ಮದಲ್ಲಿ ಗೌರವವುಳ್ಳವರು. ಈ ಎಲ್ಲ ಗುಣಗಳ ಜೀವಂತ ಸಂಗಮ ಪ್ರತೀಕ ಶ್ರೀ ಸಗರ ಕೃಷ್ಣಾಚಾರ್ಯರು

ಸಗರ ಅವರನ್ನು ನಾನು ಚಿಕ್ಕವನಾಗಿದ್ದಾಗಿನಿಂದಲೂ ಬಲ್ಲೆ. ಅವರ ಕರಿಯ ಟೊಪ್ಪಿಗೆ, ಷೇರವಾನಿ ಅಥವಾ ಜೋಧಪುರಿಕೋಟು, ಕಚ್ಚೆಪಂಚೆ, ಢಾಳಾದ ಗಂಧಾಕ್ಷತೆಗಳು ಹಣೆಯಮೇಲೆ ಪ್ರಸನ್ನತೆಯನ್ನು ಹೆಚ್ಚಿಸಿರುವ ಸಂಕೇತ. ಈ ಕುರುಹುಗಳುಳ್ಳ ಸಾಹಿತ್ಯಯೋಗಿ ನನ್ನ ಮನಸ್ಸಿನಲ್ಲಿ ಮನೆ ಮಾಡಿ ಕುಳಿತಿದ್ದಾರೆ. ಅವರಿಗೂ ನನಗೂ ಸುಮಾರು ಇಪ್ಪತ್ತು ವರ್ಷಗಳ ಅಂತರ ಈ ಅಂತರದ ಕಿರಿಯನಾದ ನನ್ನಮೇಲೆ ಅವರ ವ್ಯಕ್ತಿತ್ವದ ಪರಿಣಾಮ ಸಾಕಷ್ಟು ಆಗಿದೆ. ಏಕೆಂದರೆ ನನ್ನ ಬಾಲ್ಯದ ಕೆಲವು ವರ್ಷಗಳು ಅವರ ಕಾರ್ಯ ಕ್ಷೇತ್ರವಾದ ಶಹಾಪುರ-ಸುರಪುರ ತಾಲ್ಲೂಕಗಳಲ್ಲಿ ಸರಾಗವಾಗಿ ಸಾಗಿ ಬಂದಿವೆ. ಅವರು ಉಸುರಾಡಿದ ಗಾಳಿಯನ್ನುನಾನು ಉಸುರಾಡಿದ್ದೇನೆ. ಆ ನೆಲದ ಪವಿತ್ರ ಕಣಗಳು ನನ್ನ ಮೈಯಲ್ಲಿಯೂ ಮೈಗೂಡಿ ರಾಷ್ಟ್ರಾಭಿಮಾನವನ್ನು ಕೆರಳಿಸಿವೆ.

ಆಗಿನ್ನು ನಾನು ಮೂರನೆಯ ತರಗತಿಯಲ್ಲಿರಬೇಕು. ಅವರು ಶಹಪುರದಲ್ಲೊಮ್ಮೆ ನಮ್ಮ ಮನೆಗೆ ಬಂದಿದ್ದರು. ಅದರ ನೆನಪು ಸ್ವಲ್ಪ ಮಸಕು ಮಸಕಾಗಿ ಉಳಿದಿದೆ. ಅಂದು ನಮ್ಮ ತಂದೆಯವರ ಜೊತೆಯಲ್ಲಿ ಬಹಳಷ್ಟು ಮಾತಾಡಿದರು ಆ ಮಾತುಗಳಲ್ಲಿ ನನಗಾಗ ಕೇಳಿಸಿದ್ದು ಅನೇಕ ಸಲ ಬಂದ "ಕನ್ನಡ" ಪದ-ಸಾಹಿತ್ಯ, ಕವಿತೆ, ಪತ್ರಿಕೆ ಮೊದಲಾದ ಏನೇನೋ ! ಮುಂದೆ ಆಗೀಗ ಕಾಣುವ ಸಂದರ್ಭ ಬಂದಿದ್ದರೂ ನಮ್ಮಿಬ್ಬರನ್ನು ಬಹಳ ಸಮೀಪಕ್ಕೆ ತಂದದ್ದು ಎಂ. ಎ. ಪರೀಕ್ಷೆ-ಅವರು ಬಾಹ್ಯೇತರ (External) ವಿದ್ಯಾರ್ಥಿ.

ನಾನು ದಾಖಲಾತಿ ತೆಗೆದು ಕೊಂಡ ವಿದ್ಯಾರ್ಥಿ. ಈ ಸಂದರ್ಭದಲ್ಲಿ ಅನೇಕ [illegible] ಉಸ್ಮಾನಿಯಾ ವಿಶ್ವವಿದ್ಯಾಲಯದ ಲ್ಯಾಂಡ್‌ಸ್ಕೇಪ್ ಗಾರ್ಡನ್ನಿನಲ್ಲಿ ಕುಳಿ[illegible] ನನ್ನ ಸಾಹಿತ್ಯದ ಬಗೆಯನ್ನು ಕುರಿತು ಅವರು ಅಭಿಮಾನದಿಂದ ಸಾಹಿತ್ಯಕ ಸ[illegible] ಲೋಚನೆ ಮಾಡಿದ್ದುಂಟು.

ಮುಂದೆ ಕೆಲವು ಕಡೆ ಸಾಹಿತ್ಯ ಸಮ್ಮೇಳನಗಳಲ್ಲಿ, ಕವಿಸಮ್ಮೇಳ[illegible] ಗಳಲ್ಲಿ. ಶಿಕ್ಷಣ ಶಿಬಿರಗಳಲ್ಲಿ ಅವರ ಭೆಟ್ಟಿ ಹೀಗೆ ಕೂಡಿದಾಗಲೆಲ್ಲ ಅವ[illegible] ನನ್ನ ಬೆನ್ನ ಮೇಲೆ ಕೈ ಹಾಕಿ, "ನನ್ನ ಏನೇನು ಓದಿದಿರಿ. ಸಾ[illegible] [illegible] ನೀವು [illegible] ಬರೆಯುವುದನ್ನು ಬಿಡಬಾರದು [illegible]. ಅ[illegible] ರ ಶಕ್ತಿಯನ್ನು ಬೆಳೆಸಿಕೊಂಡು ಮಾನ್ಯ [illegible] ನೀಡಿದ್ದೇನೆ. ಇಟ[illegible] ಅವರ [illegible] ದ್ದರೆ" ವೊದಲ ದ [illegible] ನನ್ನ [illegible] ನ್ನು ಬೆನ್ನು ತಟ್ಟಿ ಬರೆಯಲು ಪ್ರೋತ್ಸಾಹಿಸುತ್ತ ಬಂದರು. [illegible] ಹ[illegible] ಕೊಂಡಿರುವ ಸಾಹಿತ್ಯಕ ಕಾರ್ಯಗಳಲ್ಲಿ ನನ್ನನ್ನು ಮರೆಯದೆ! ತ[illegible] ಸೇರಿಸಿಕೊಂಡು ನನ್ನನ್ನು ಬಹು ಎತ್ತರಕ್ಕೆ ತರಲು ಪ್ರಯತ್ನಿಸಿದರು [illegible] ಒಂದು ನಿದರ್ಶನವಾದ ಉದಾಹರಣೆ ನನ್ನನ್ನು "ಮಂದಾಕಿನಿಯು" ಸಲಹಾ ಮಂಡಳಿಯಲ್ಲಿ ಡಾ. ಸಿದ್ಧಯ್ಯ ಪುರಾಣಿಕ ಶ್ರೀ ಇಟಗಿ ಅವರೊಡ[illegible] ಸೇರಿಸಿಕೊಂಡುದುದು ಸಾಕ್ಷಿಯಾಗಿದೆ. ಇದು ಅವರ ಅಭಿಮಾ[illegible] ಈ ಗೌರವವನ್ನು ಕಾಪಾಡಿಕೊಳ್ಳಲು ನಾನು ನಿಷ್ಠೆಯಿಂದ ಪ್ರಯ[illegible] ಮಾಡಬೇಕಾಗಿದೆ.

ದಿನಾಂಕ 7-6-1917 ರಲ್ಲಿ ಜನ್ಮತಾಳಿದ ಶ್ರೀ ಕೃಷ್ಣಾಚಾರ್ಯ[illegible] 1-4-1974 ರವರೆಗೆ ಶಿಕ್ಷಣ ಇಲಾಖೆಯಲ್ಲಿ ಐದನೆ ಹುದ್ದೆಗಳಲ್ಲಿ ಎಂದರೆ ಶಿಕ್ಷ[illegible] ರಾಗಿ, ಮುಖ್ಯೋಪಾಧ್ಯಾಯರಾಗಿ, ನಿರೀಕ್ಷಕರಾಗಿ, ಪ್ರಾಧ್ಯಾಪಕರಾ[illegible] ಪ್ರಾಚಾರ್ಯರಾಗಿ ಬಹು ದಕ್ಷತೆಯಿಂದ ಕಾರ್ಯನಿರ್ವಹಿಸಿ ಶಿಕ್ಷಣಕ್ಷೇತ್ರ[illegible] ಗೌರವವನ್ನು [illegible] ಮಂದಾಕಿನಿಯನ್ನು [illegible] ಯುವರಿಗೆ ತಂದು [illegible] ವ[illegible] ದಾಗಿದ್ದಾರೆ. ಅವರ ಶಿಕ್ಷಕರಾಗಿ [illegible] ವಿದ್ಯಾರ್ಥಿಗಳ [illegible]

ದ್ದಾರೆ. ಸರಿಯಾದ ಸಲಹೆನೀಡಿ ಚಿಕ್ಕ ಸಂಸಾರಗಳ ನಂದಾದೀಪವಾಗಿದ್ದಾರೆ. ಇಂತಹರ ಸೇವೆಯನ್ನು ಗಮನಿಸಿ , ಎಲೆಮರಯ ಹೂವಿನ ಪರಿಮಳವನ್ನು ಆಘ್ರಾಣಿಸಿ ' ಕನ್ನಡ ಜನತೆ– ಇವರನ್ನು ವಿಶೇಷವಾದ ರೀತಿಯಲ್ಲಿ ಗೌರವಿಸಬೇಕು. ಏಕೆಂದರೆ ಹಳ್ಳಿ ಬೆಳಗಿದರೆ ಮಾತ್ರ ದಿಲ್ಲಿ ಬೆಳಗಬೇಕಲ್ಲವೆ ? ಈ ಮಹಾನುಭಾವರು ಹಳ್ಳಿಯನ್ನು ಬೆಳಗಿದವರು. ಶ್ರೀರೈತನಎದೆಯಲ್ಲಿ ಸಾಹಿತ್ಯಸಮಾರಾಧನೆಯನ್ನು ಚಿಮ್ಮಿಸಿದವರು. ಇಂತಹ ಶಿಕ್ಷಕರ ಬಗ್ಗೆ ಮಹಾಜನರು ಮಮತವರ್ಜ ವಹಿಸಬೇಕು. ತಮ್ಮ ಆಯುಷ್ಯವನ್ನೇ ಶಿಕ್ಷಣ ಕ್ಷೇತ್ರಕ್ಕೆ ಸಮೆಸಿದವರಿಗೆ ನ್ಯಾಯವಾದ ಗೌರವ ಸಲ್ಲಬೇಕಲ್ಲವೆ ? ಇಂತಹ ಗೌರವಗಳಿಂದ ನುಡಿದಾಯಿ ಸಂಪ್ರೀತಳಾಗುತ್ತಾಳೆ.

ಶ್ರೀ ಸಗರ ಅವರು ಒಳ್ಳೆಯ ಶಿಕ್ಷಕರಾಗಿದ್ದಂತೆ ನುರಿತ ಲೇಖಕರಾಗಿದ್ದಾರೆ. ಅವರ ಘನತೆಯನು ಬೆಳಗುವ ಅನೇಕ ಕೃತಿಗಳು ಸಾಹಿತ್ಯಭಂಡರವಗಾಗಲೇ ಲೋಕವನ್ನು ನೀಡಿರಾರಾಜಿಸುತ್ತಿವೆ. ಈ ಆಚಾರ್ಯರ, "ಆದರ್ಶ ಈವುಕಥಾಸಂಕಲನವಾವರೆ "ಅಮೃತಬಿಂದು" ಕವನ ಮಧುವಿನ ಸಂಕಲನವ ಜೀವನ ಸಂಸಾರವು ಹಾಸ್ಯಭಂತ ನಾಟಕ. ಹೀಗೆ ಅವರ ಕೈ ಸಾಹಿತ್ಯದ. ಹಲವು ಮುಖಗಳ ಶೋಭೆಯನ್ನು ಹೆಚ್ಚಿಸಿದೆ.

ಕಥೆ ' ಕವನ ' ನಾಟಕಗಳಲ್ಲಿ ಕೈಯಾಡಿ ಪಳಗಿದ ಇವರ ಕೈ' ಹಲವು "ಗಂಭೀರವಾದ ಮೌಲ್ಯಶ್ರೀಮೀಕ್ಷಿಕೆಯಿಂದ ಕಂಗೊಳಿಸುವಸಾಕಷ್ಟು ಲೇಖನಗಳನ್ನು ಬರೆದು ಅಮೃತಹಸ್ತವೆಂದು ಹೆಸರು ಗಳಿಸಿವೆ. ಅವುಗಳೆಲ್ಲ ಪ್ರಜಾ ' ಸಾಧನಾ ' ಸಾರಥಿ , ಜಯಂತಿ, ಸಿದ್ಧಗಂಗಾ , ಕರ್ನಾಟಕ ವೈಭವ , ಜಯಂತಿ ಜೀವನ , ಕನ್ನಡನುಡಿ ಮೊದಲಾದ ಪತ್ರಿಕೆಗಳಲ್ಲಿ ' ಪ್ರಕಾಶ , ಗೊಂಡಿವೆ. ಅವುಗಳನ್ನೆಲ್ಲ ಪೇರಿಸಿದ ಲೇಖನ ಸಂಚಯ ಹೊರಬಂದು ಸರಸ್ವತೀ ಕಂಠಾ ಭರಣವಾಗಬೇಕಾಗಿದೆ.

ಶ್ರೀ ಕೃಷ್ಣಾಚಾರ್ಯರದು ಸ್ವಂತ ಲೆಕ್ಕಣಿಕೆಯಂತೆ- ಸಂಪಾದನಾ ಕಾರ್ಯದಲ್ಲಿಯೂ ಸಿದ್ಧ ಹಸ್ತ. ತಮ್ಮ ಸುತ್ತಲಿನ ಜನರನ್ನು ಆಕರ್ಷಿಸಿ,

ಅವರಪ್ರತಿಭೆಗಳನ್ನು ಆಳಿಸಿ ಭಾವಗೀತದ ನವನೀತವನ್ನೋ, ಕತೆಯ ಸಿಹಿತೆ ನೆಯನ್ನೋ, ನಾಟಕದ ಸಂಘರ್ಷವನ್ನೋ ಅವರ ಅನುಭಾವದಿಂದ ಕೃತಿಗೆ ಇಳಿಸುವಂತೆ ಮಾಡಿ ಸಾರಸ್ವತ ಲೋಕವನ್ನು ವಿಸ್ತಾರಗೊಳಿಸಿದ್ದಾರೆ. ಬರೆ ಯುವ ರುಚಿಯನ್ನು ಸಾಮಾನ್ಯರಲ್ಲಿ ಕುದುರಿಸಿದ್ದಾರೆ. ಅಂತೆಯೇ ಇವರು ಕೇವಲ ಸಾಹಿತ್ಯದ ವ್ಯಕ್ತಿಯಲ್ಲ, ಕೇವಲ ಶಕ್ತಿಯಲ್ಲ – ಇವರು ಒಂದು ಸಂಸ್ಥೆ. ಈ ಮಾತಿಗೆ ಶ್ರುತಿ - ನುಡಿಯುತ್ತಿವೆ ಶಹಾಪುರದ ವೇಣುಗೋಪಾಲ ವಾಚನಾಲಯ, ರಂಗಂಪೇಟೆಯ ಕನ್ನಡ ಸಾಹಿತ್ಯ ಸಂಘ ಮತ್ತು ಸಾರ್ವಜನಿಕ ಸಾಹಿತ್ಯ ಸಂಘಗಳು, ಬೆಂಗಳೂರಿನ ವಾಗ್ವಿಲಾಸ ಪ್ರಕಾಶನಗಳು. ಈ ಸಂಸ್ಥೆಗಳ ಕಿರಣಗಳೇ "ಮಧುರಮಿಲನ "ಕವನಕುಸುಮ" "ಬಾಲನಂದನ" "ಕನ್ನಡ ಕವಿಕಾವ್ಯದರ್ಶನ" ಇತ್ಯಾದಿ ಈ ಕಾರ್ಯಘನತೆಯನ್ನು ಗಮನಿಸಿ ಸಾರಸ್ವತ ಲೋಕವು ಇವರನ್ನು ಮನಸ್ವೀ ಗೌರವಿಸಿ ಅವರ ಕಾರ್ಯ ಗೌರವ ವನ್ನು ಇನ್ನಷ್ಟು ಹೆಚ್ಚಿಸಬೇಕು.

ಆಚಾರ್ಯರು ಬಹುಭಾಷಾ ವಿಶಾರದರು. ಕನ್ನಡ, ಉರ್ದು, ಹಿಂದಿ, ಇಂಗ್ಲಿಷ್ ಭಾಷೆಗಳು ಕರತಲಾಮಲಕ. ಅವರಲ್ಲಿಯ ಕನ್ನಡ ಉರ್ದು ಗಳೆಂದರೆ ಗಂಗೆಜಮುನೆ. ಗೇರುಸೊಪ್ಪೆಯ ಜಲಪಾತ ಸಾಹಿತ್ಯರಸದ ಓತಪ್ರೋತ ಸವ್ಯಸಾಚಿ.

ಶ್ರೀ ಸಗರ ಅವರ ಉರ್ದುಭಾಷೆಯಲ್ಲಿಯ 'ಹಕೀಕಿಮುಶಾವಾತ್' ಮತ್ತು "ಮಹಾಕವಿಗಳು ಉರ್ದುಭಾಷೆಯ ಸಂಶಿತರ ಮೆಚ್ಚುಗೆಯನ್ನು ಪಡೆದಿವೆ. ಈ ಕೃತಿಗಳನ್ನು ಅವಲೋಕಿಸಿದಾಗ ಯಾರೋ ಮುಸಲ್ಮಾನನಾ ಕಾಲದ ಒಬ್ಬ ಮೌಲ್ವಿಯವರು ಉರ್ದು ಬರೆದಿದ್ದಾರೇನೋ ಎಂದು ಎನ್ನಿಸುತ್ತದೆ. ಅಷ್ಟೇ ಅಲ್ಲ ಈ ಕೃತಿಗಳ ಲೇಖಕರು ಉದ್ದ ಬಿಳಿಗಡ್ಡ ಬಿಟ್ಟಿರಬೇಕು. ರೂಮೀ ಟೊಪ್ಪಿಗೆ, ಶೇರವಾನಿ, ಪಾಜಾಮ ಮುಂತಾದವುಗಳನ್ನು ಧರಿಸಿರಬೇಕು. ದಾರಕಟ್ಟಿದ ಕನ್ನಡಕವನ್ನು ಇಟ್ಟಿರಬೇಕೆಂಬ ಕಲ್ಪನೆಗೆ ಗರಿಮೂಡುತ್ತವೆ. ಆದ ಇವುಗಳ ಲೇಖಕರು ಕನ್ನಡದ ಕೃಷ್ಣಾಚಾರ್ಯರೆಂದಾಗ ಒಂದುಕ್ಷಣ ನಂಬಲಸಾಧ್ಯವಾಗುತ್ತದೆ. ತಾತ್ಪರ್ಯ, ಆಚಾರ್ಯರ ಉರ್ದು ಭಾಷೆಯ

...ಭುತ್ವ ಮಠ್ಯಾಮದೀನಾಗಳಷ್ಟು ಪವಿತ್ರ ಹಾಗೂ ಲಘುವಿ ಉರ್ದುವಿನ ...ಂಭೀರ್ಯಗಳಿಂದ ಕೂಡಿದೆ ಎಂಬುದು. ಈ ತರಹದಯೋಗ್ಯತೆ ಇರುವವರು ...ಪರೂಪ. ಇಂತಹರ ಸೇವೆಯನ್ನು ದೇಶಪಡೆಯಲು ಮುಂದಾಗಬೇಕು. ...ಕೆಂದರೆ ಕನ್ನಡದ ಕಣಜದ ಮುತ್ತು ರತ್ನಗಳನ್ನು ಉರ್ದುವಿಗೆ, ಉರ್ದುವಿನ ...ಣಜದ ಮುತ್ತು ರತ್ನಗಳನ್ನು ಕನ್ನಡಕ್ಕೆ ಬರಮಾಡಿಕೊಳ್ಳುವ ಸಾಮರ್ಥ್ಯವಿ ...ವವರು ಬೆರಳಿನ ಮೇಲೆ ಎಣಿಸುವಷ್ಟು ಜನವಿದೆ. ಆ ಹಲವರಲ್ಲಿ ಇವರು ...ಮುಖರು. ಆದ್ದರಿಂದ ನಿವೃತ್ತರಾಗಿರುವ ಈ ಆಚಾರ್ಯರ ಮುಂದಿನ ...ಯುಷ್ಯವನ್ನೆಲ್ಲ ಈ ಅಂತರಭಾರತಿಯ ಬಾಂಧವ್ಯದ ಕೆಲಸಕ್ಕೆ ಮೀಸಲಾಗಿರಿ ...ವಂತೆ ನೋಡಿಕೊಳ್ಳಬೇಕು. ಆ ತರಹದ ಸಕಲ ಸೌಲಭ್ಯಗಳನ್ನು ಒದಗಿಸಿ ...ಡಬೇಕು, ಇಂತಹ ಈ ಬಗೆಯ ಸೇವೆಯಿಂದ ನಮ್ಮ ನಾಡನುಡಿ ಪುನೀತ ...ಗುತ್ತದೆ. ಭಾಗ್ಯದಬಾಗಿಲು ತೆರೆಯುತ್ತದೆ

ಬಹುಮುಖ ಶಕ್ತಿಯುಳ್ಳ ಶ್ರೀ ಕೃಷ್ಣಾಚಾರ್ಯರು ಬಾಳಿನಲ್ಲಿ ತಾವು ...ನೇಕ ಕಹಿಗಳನ್ನು ನುಂಗಿ ಅಮೃತದ ಬಿಂದುಗಳನ್ನಷ್ಟೇ ಸಹೃದಯರಿಗೆ ...ೀಡಿದ ನಂಜುಂಡರು. ಇವರಿಗೆ ಇಂದಿರೇಶನು, ನೂರು ವರ್ಷದ ಆರೋಗ್ಯ ...ಗ್ಯದಿಂದ ಕೂಡಿದ ತುಂಬುಬಾಳು ನೀಡಲಿ. ಸಗರ ನಾಡಿನ ಈ ಆಚಾರ್ಯ ... ಅಖಂಡವಾಗಿ ತಾಯಿಭಾರತಿಯ ಹಿರಿಮೆಯನ್ನು ಹೆಚ್ಚಿಸಲಿ. ನಮ್ಮ ...ಡಿನುಡಿಗೆಲ್ಲ ದಾರಿದೀಪವಾಗಲಿ!

...ಹಾಬಾದ
...-೩-೧೯೭೭

— ವಸಂತ ಕುಷ್ಟಗಿ ಎಂ. ಎ.
ಕನ್ನಡ ವಿಭಾಗದ ಮುಖ್ಯಸ್ಥ

—೦— ಸದ್ವರ್ತನೆ —೦ —

ಪರವಧೂ ಪರಧನವ ಮುಟ್ಟದೆ ।
ದುರಿತಕರ ಪರಹಿಂಸೆ ಗೈಯದೆ ।
ಪರರ ನಿಂದಾದಿಗಳ ದೂರೀಕರಿಸಲದರಿಂದ ॥
ಪುರಹರನು ನಿಮಗೊಲಿದು ಹರುಷದಿ ।
ಪರಮ ಸುಖವೀಯುವನು ನಿಜದಿಂ ।
ಧರೆಯೊಳಿಹಪರ ಸುಖಗಳಿಗೆ ಸದ್ವರ್ತನೆಯೆಮುಖ್ಯ

ಶ್ರೀ ಚರಬಸವೇಶ್ವರ ಪುರಾಣ ಸಂಧಿ ೨೦ ಪದ ೨೦

.... ನಾ ಸ್ತಿ ಕ ತೆ ....

ಪರರ ನಿಂದೆಯು ಪರರ ಹಿಂಸೆಯು ।
ಪರರ ಧನದಪಹರಣ ಪರಸ್ತ್ರೀ ।
ಯರ ಸಮಾಗಮವಾತ್ಮಸ್ತುತಿಘನಮೋಸಚೋರತ
ದುರಿತಕರವಹ ಲಂಚ ವಂಚನೆ ।
ಹಿರಿದು ಶಿಶುಗೋಭ್ರೂಣಹತ್ಯಗ ।
ಳುರುತರದಿ ಪೆಚ್ಚುತ್ತಿತಲೆದೋರುವುದು ನಾಸ್ತಿಕತೆ

ಶ್ರೀ ಚರಬಸವೇಶ್ವರ ಪುರಾಣ ಸಂಧಿ ೨೧-ಪದ ೩೫

ಸಂಪಾದಕೀಯ

....

ಕೃತಜ್ಞತೆಗಳು

ನಮ್ಮ ಪತ್ರಿಕೆಯ ಪ್ರಕಾಶಕರು ಈ ಸಲದ ಸಂಚಿಕೆಯನ್ನು ನನ್ನ ಷಷ್ಟ್ಯಬ್ದಿ ಸಮಾರಂಭದ ವಿಶೇಷ ಸಂಚಿಕೆಯನ್ನಾಗಿ ಹೊರಡಿಸಿ, ನನ್ನ ಬಗೆಗೆ ಅವರು ಇರಿಸಿದ್ದ ಆದರಾಭಿಮಾನಗಳನ್ನು ವ್ಯಕ್ತಗೊಳಿಸಿದ್ದಾರೆ. ಅದಾವ ದೈವೀ ಸಂಕಲ್ಪವೊ, ನಾವಿಬ್ಬರೂ ಸೇರಿ ಪತ್ರಿಕೆ ನಡೆಸಲು ಆರಂಭಿಸಿದೆವು. ರಿಕ್ತ ಹಸ್ತದಿಂದ ಪತ್ರಿಕೆ ನಡೆಸಲು ಸಿದ್ಧರಾದೆವು. ನಾಡ ಬಂಧುಗಳು ನಮಗೆ ಪ್ರಾಂಜಲ ಮನಸ್ಸಿನಿಂದ ನೆರವಾದರು. ನಮ್ಮಿರ್ವರ ಉತ್ಸಾಹಕ್ಕೆ ಅಮೃತ ಸಿಂಚನ ಗೈದರು. ಆ ಒಂದು ಧೈರ್ಯದಿಂದಲೇ ಮುನ್ನಡೆ ಇರಿಸಿದ್ದೇವೆ.

ಲೇಖಕ ಮಿತ್ರರೂ ಅಭಿಮಾನವಿರಿಸಿ ಲೇಖನಗಳನ್ನು ಕಳಿಸಿ ಪತ್ರಿಕೆಯ ವಿಶೇಷತೆಯನ್ನು ಹೆಚ್ಚಿಸಿದ್ದಲ್ಲದೆ ನನ್ನನ್ನೂ ಪ್ರಕಾಶಕರನ್ನೂ ಋಣಿಯನ್ನಾಗಿಸಿದ್ದಾರೆ. ಅವರ ಈ ಋಣವನ್ನು ನಾವು ತೀರಿಸಲಾರದವರಾಗಿದ್ದೇವೆ. 'ದೇವರು ಅವರೆಲ್ಲರಿಗೆ ಸಕಲ ಸೌಭಾಗ್ಯಗಳನ್ನಿತ್ತು ಕಾಪಾಡಲಿ!' ಎಂದು ತುಂಬು ಹೃದಯದಿಂದ ಹರಸುತ್ತೇವೆ.

ಈ ಸಂದರ್ಭದಲ್ಲಿ ನಾನು ಪ್ರಕಾಶಕರ ಉಪಕಾರವನ್ನು ಎಷ್ಟು ಸ್ಮರಿಸಿಕೊಂಡರೂ ಕಡಮೆ. ಅವರು ಆರ್ಥಿಕ ಸ್ಥಿತಿಯಿಂದ ಬಡವರು ಆದರೆ ಮನಸ್ಸಿನಿಂದ ಆಗರ್ಭ ಶ್ರೀಮಂತರು. ನನ್ನಂಥ ಸಾಮಾನ್ಯನನ್ನೂ ಪ್ರಕಾಶಕ್ಕೆ ತರುವ ಹೃದಯವಂತಿಕೆಯನ್ನೂ ಅವರು ವ್ಯಕ್ತಗೊಳಿಸಿದ್ದು ಅವರ ದೊಡ್ಡಸ್ತಿಕೆಯನ್ನು ಎತ್ತಿ ತೋರಿಸುತ್ತದೆ- ನನ್ನ ಅವರ ಪ್ರೀತಿ-ವಿಶ್ವಾಸಗಳೂ, ಬಾಂಧವ್ಯವೂ ಹೀಗೆಯೇ ಅಭಿವೃದ್ಧಿ ಹೊಂದುತ್ತ ನಡೆಯಲಿ, ನಮ್ಮಿಬ್ಬರ ಭಗೀರಥ ಪ್ರಯತ್ನದಿಂದ 'ಮಂದಾಕಿನಿ' ಜ್ಞಾನಗಂಗೆಯಾಗಿ ಪ್ರವಹಿಸಲಿ! ಮತ್ತು ಅವರ ಕಷ್ಟ-ನಿಷ್ಠುರಗಳು ದೂರಾಗಿ, ನೆಮ್ಮದಿಯ ಬಾಳು ನಡೆಸುವಂತಹ

ಸರ್ವಕಾಲ ಪರಮಾತ್ಮ ಅವರಿಗೆ ಕರುಣಿಸಲಿ! ಎಂದು ಮನಃಪೂರ್ವಕ
ಹಾರೈಸುತ್ತೇನೆ.

'ಕುರ್ವಂತು ನೋ ಮಂಗಲಂ!'

ಚಿರಸ್ಮರಣೀಯ ವ್ಯಕ್ತಿತ್ವ

ರಾಷ್ಟ್ರದ ರಥ ಸುಗಮವಾಗಿ ಸಾಗಲು ಅತ್ಯಂತ ಕುಶಲ, ಸಮರ್ಥ
ಹಾಗೂ ದಕ್ಷ ಸಾರಥಿಯ ಅಗತ್ಯವಿರುವದು ಸ್ವಾಭಾವಿಕ. ಅಂಥ ಸಾರಥಿ
ಯೊಬ್ಬರು ನಮ್ಮ ರಾಷ್ಟ್ರವನ್ನು ಪ್ರಗತಿಪಥದಲ್ಲಿ ಸಾಗಿಸಿಕೊಂಡು ಹೋಗು
ತ್ತಿರುವಾಗಲೇ ಅಳಿದು ಬಿದ್ದುದು ರಾಷ್ಟ್ರದ ದುರ್ದೈವವಷ್ಟೇ ಅಲ್ಲ, ವಿಶ್ವಕ್ಕೂ
ತುಂಬಬಾರದ ಹಾನಿ. ದೈವೀ ಪುರುಷರು ಹುಟ್ಟಿ ಬರುವುದು ಅಪರೂಪ-
ನಮ್ಮನ್ನಗಲಿ, ನಮ್ಮೆಲ್ಲರನ್ನೂ ಅನಾಥಗೊಳಿಸಿದ, ನಮ್ಮ ನೆಚ್ಚಿನ ರಾಷ್ಟ್ರ
ಪತಿಗಳಾಗಿದ್ದ, ದಿವಂಗತ ಶ್ರೀ ಫಕ್ರುದ್ದೀನ್ ಅಲಿ ಅಹಮ್ಮದ್‌ರವರು ಅಂಥ
ಅಪರೂಪದ ವ್ಯಕ್ತಿಗಳಲ್ಲೊಬ್ಬರು. ಅವರು ಸಾತ್ವಿಕತೆಯ ಸಾಕಾರ ರೂಪವಾ
ಗಿದ್ದರು. ರಾಷ್ಟ್ರದ ಅತ್ಯಂತ ಉನ್ನತ ಹಾಗೂ ಗೌರವಾನ್ವಿತ ಸ್ಥಾನವನ್ನಲಂಕ
ರಿಸಿ ಆ ಸ್ಥಾನಕ್ಕೆ ಭೂಷಣ ಪ್ರಾಯರಾದರು. ಅವರು ಕೇವಲ ಒಂದೇ ಒಂದು
ಅಂಶಕ್ಕೆ ಅಂಟಿಕೊಂಡು ತಮ್ಮ ಜೀವನ ಸಾಗಿಸಿದರು; ಜನರಿಗೂ ದಾರಿದೀಪ
ವಾದರು. ಆ ಅಂಶವೇ "ದೈವೀಅಂಶ". ಅಂಥ ಉದಾತ್ತ ಅಂಶದ ಉಪಾಸನೆ
ಯಿಂದಾಗಿ ಅವರ ಜೀವನ ಪುಷ್ಪ ಅರಳಿ ಗಮಗಮಿಸಿತು. ತನ್ನ ಸುಗಂಧವನ್ನು
ಎಲ್ಲೆಡೆಗೂ ಬೀರಿತು. ಅಂತೆಯೇ ವಿಶ್ವದ ಜನತೆ "ಅಯ್ಯೋ" ಎಂದು ಗೋಳಿ
ಟ್ಟಿತು.

ವಿವಿಧ ಪತ್ರಿಕೆಗಳಲ್ಲಿ, ಅವರ ಹಿತೈಷಿಗಳು, ಅವರನ್ನು 'ಸಭ್ಯತೆಯ
ಸಾಕಾರ', 'ಶ್ರೇಷ್ಠ ಭಾರತೀಯ', 'ಉಜ್ವಲದೇಶ ಭಕ್ತ', 'ಸಭ್ಯ ರಾಜ
ಕಾರಣಿ' 'ಕ್ರೀಡಾ ಪ್ರೇಮಿ', ಎಂದು ಮುಂತಾಗಿ ವರ್ಣಿಸಿ, ತಮ್ಮ ಗೌರವಾದರ
ಗಳನ್ನು ಸೂಚಿಸಿದ್ದಾರೆ. ನಾನವರನ್ನು, 'ಮಾನವಕುಲರಕ್ಷಕ,' 'ಮಾನವೀ
ಯ ಸಾಕಾರ ಮೂರ್ತಿ', 'ಸಂಸ್ಕೃತಿಯ ಸಂಪಾದಿತ', ಎಂದು ಬಣ್ಣಿಸಿ
ಅತಿಶಯೋಕ್ತಿಯೇನಾಗಲಿಕ್ಕಿಲ್ಲ. ಏಕೆಂದರೆ ಉನ್ನತಸ್ಥಾನದಲ್ಲಿದ್ದವರು ಭ

ಭಲೇ ಎನ್ನಿಸಿಕೊಳ್ಳಬೇಕಾದರೆ ಮಾನವೀಯತೆಯ ಇಂಥ ಉನ್ನತಾಂಶಗಳು ಅವರಲ್ಲಿರಬೇಕಾದುದು ಅಗತ್ಯ ನಮ್ಮನ್ನಗಲಿದ ರಾಷ್ಟ್ರಪತಿಗಳಲ್ಲಿ ಅವು ಮನೆ ಮಾಡಿಕೊಂಡಿದ್ದುವು. ಇರುವಷ್ಟು ಕಾಲ ಮನುಷ್ಯರಾಗಿ ಬಾಳಿದರು. ದೇವತೆಡೆಗೆ ಸಾಗಿದರು. ಎಲ್ಲರ ಬಾಯಲ್ಲಿ ಉಳಿದರು: ಹಲ್ಲುಗಳಲ್ಲಿ ಸಿಕ್ಕಲಿಲ್ಲ. ಇಂಥ ವ್ಯಕ್ತಿತ್ವ ಹೊಂದುವುದಕ್ಕೂ ಪೂರ್ವದ ಪುಣ್ಯಬೇಕು. ಅವರ ಹುಟ್ಟಿನಿಂದ ಮಾನವಕುಲ ಪಾವನಗೊಂಡಿತು, ಇಸ್ಲಾಂಧರ್ಮವೂ ಗೌರವ ಪಡೆಯಿತು. ಹೆತ್ತತಾಯಿಯ ಗರ್ಭ 'ಪವಿತ್ರಗರ್ಭ' ಎನಿಸಿತು. ಇಂಥ ಬಾಳೇ ಸಾರ್ಥಕವಾದ ಬಾಳು!

ಅವರ ನಿಧನದಿಂದಾಗಿ ರಾಷ್ಟ್ರಕ್ಕೇ ಅಪಾರ ನಷ್ಟವುಂಟಾದಾಗ, ಕುಟುಂಬ ವರ್ಗಕ್ಕೆ ಆದ ಹಾನಿ, ಸಂತಾಪ ಅವರ್ಣನೀಯ. ನಾವವರಿಗೆ ಹೇಗೆ ಸಂತೈಸಬೇಕೋ, ತಿಳಿಯದಾಗಿದೆ. ಆದರೂ ಲೋಕದ ರೂಢಿಯಂತೆ ಅವರಿಗೆ ನಾವು ಸಾಂತ್ವನ ಹೇಳಲೇಬೇಕಾಗಿದೆ. ರಾಷ್ಟ್ರಪತಿಗಳ ಆದರ್ಶ ಜೀವನದಿಂದಾಗಿ ಅವರ ಆತ್ಮಕ್ಕೆ ಸ್ಥಿರಶಾಂತಿ ಸಿಕ್ಕಿದೆ. ಅವರ ಕುಟುಂಬಕ್ಕೂ, ಬಂಧುವರ್ಗಕ್ಕೂ, ಅವರ ಅಗಣಿತ ಹಿತೈಷಿಗಳಿಗೂ ತಾಳ್ಮೆ, ಸಹನೆ, ದಯಪಾಲಿಸಲೆಂದು ಪರಮಾತ್ಮನಲ್ಲಿ ಪ್ರಾರ್ಥಿಸಿಕೊಳ್ಳದೇ ವಿಧಿಯಿಲ್ಲ. ಅವರಿಗಾಗಿ ನಾವು ನಿರ್ಮಿಸುವ ಸ್ಮಾರಕವೊಂದೆ. ನಾವೂ ಅವರಂತೆ ಸಭ್ಯರಾಗಿ, ಸುಸಂಸ್ಕೃತರಾಗಿ ಬಾಳಿ ಮಾನವತೆಯ ಕೀರ್ತಿಕಲಶವನ್ನು ಎತ್ತಿ ಹಿಡಿಯಬೇಕು. ಅಂದಾಗಲೇ ಅವರ ಆತ್ಮಕ್ಕೆ ನಾವು ಸಲ್ಲಿಸುವ ಆದರ್ಶ, ಗೌರವ!

— ಸುಸ್ವಾಗತ ....

'ಜನತೆಯ ಮನಸ್ಸಿನಲ್ಲಿಯ ವ್ಯಾಪಾರ ಜನಾರ್ದನನೇ ಬಲ್ಲ-' ಹೋದ ಚುನಾವಣೆಯಲ್ಲಿ 'ಇಂದಿರಾ ಗಾಳಿ' ಬೀಸಿತ್ತು ಈಗ 'ಜನತಾಗಾಳಿ' ಬೀಸಿ, ಜನತಾಪಕ್ಷಕ್ಕೆ ಅಪೂರ್ವ ವಿಜಯ ದೊರಕಿತು. ಇದು ಅನಿರೀಕ್ಷಿತ ವೆನಿಸಿದರೂ ಅಶ್ಚರ್ಯಕರವೇನಲ್ಲ. ಜನತೆ ಎಲ್ಲ ವಿದ್ಯಮಾನಗಳನ್ನೂ ಸೂಕ್ಷ್ಮ ಸಂವೇದನೆಗಳಿಂದ ಅರ್ಥಮಾಡಿಕೊಳ್ಳುತ್ತದೆ. ಆಳುವವರು ಇದನ್ನು ಅರಿತು ನಡೆದಷ್ಟೂ ಅನುಕೂಲ. ತುರ್ತು ಪರಿಸ್ಥಿತಿಯ ಘೋಷಣೆ ಇಪ್ಪತ್ತು ಅಂಶಗಳ ಅವಾಸ್ತವ ಆಡಂಬರ, ಮತ್ತು ಅದರ ಆಚರಣೆಯಲ್ಲಿ ಅತಿ ಅವಸರ, ಅತಿರೇಕ, ಈ ಮುಧ್ಯೆ

ಐದು ಅಂಶಗಳ ಪ್ರವೇಶ ಜನತೆಗೆ ತಾರಕವಾಗುವುದಕ್ಕಿಂತ ಹೆಚ್ಚು ಮಾರಕವಾದುವು. ಅಂತೆಯೇ ಜನತೆ ಕೆರಳಿತು. ತಮ್ಮ ಸಾರ್ವಭೌಮಾಧಿಕಾರ ಚಲಾಯಿಸಿ ತಮಗೆ ಹಿತವೆನಿಸಿದ ಸರಕಾರವನ್ನು ಹೊಂದಲು ಮುಂದಾಯಿತು. ಇದರಿಂದ ಶ್ರೀಮತಿ ಇಂದಿರಾ ಗಾಂಧಿಯವರ ವ್ಯಕ್ತಿತ್ವಕ್ಕೆ ಕುಂದಿಲ್ಲ. ಅವರ ಕೆಲ ಆದರ್ಶಗಳಿಗೆ ಭಂಗವಿಲ್ಲ. ಆದರೆ ಅವುಗಳ ಆಚರಣೆಯಲ್ಲಿ ಸಂಯಮ ಇರದೇ ಇರುವುದು- ಅತಿ ಅವಸರ ವ್ಯಕ್ತಗೊಳಿಸಿದುದು ಅವರ ಪತನಕ್ಕೆ ಕಾರಣವಾಯಿತು.

ಭಾರತೀಯ ಸಂಸ್ಕೃತಿ ಪುರಾತನವಾದುದಷ್ಟೇ ಅಲ್ಲ. ಅತಿ ಭದ್ರ ತಳಹದಿಯಮೇಲೆ ನಿಂತಿದೆ. ಅದು ಕಾಲಪುರುಷನ ಯಾವ ತುಳಿತಕ್ಕೂ ಸಿಕ್ಕಿಲ್ಲ. ಸಿಕ್ಕರೂ ನಿರ್ನಾಮವಾಗಿಲ್ಲ. ಸಮಯ ಬಂದಾಗ ಸಿಡಿದೆದ್ದಿದೆ. ಮುಗಿಲೆತ್ತರಕ್ಕೂ ಮುಟ್ಟಿದೆ. ಇದನ್ನುಳಿಸಿಕೊಂಡು, ಅದರ ಭದ್ರ ಬುನಾದಿಯಮೇಲೆ ರಾಜ್ಯ ಭಾರ ವಿರಿಸಿದರೆ ಆದು ಎಂದಿಗೂ ಕುಸಿದು ಬೀಳಲಾರದು. ನಮ್ಮ ಇಂದಿನ ಭಾರತ ಸರಕಾರ ಇದನ್ನರಿತು ಜಾಗ್ರತೆಯಿಂದ ರಾಜ್ಯಭಾರ ಸಾಗಿಸಿದ್ದಾದರೆ. ಈ ರಾಷ್ಟ್ರ ಬಹುಕಾಲ ಬಾಳೀತು ! ಇಲ್ಲವಿದ್ದಲ್ಲಿ ಜನತೆ ಪುನಃ ತನ್ನ ನಿರ್ಣಯ ತಿಳಿಸಿಕೊಟ್ಟೀತು !

ಹೊಸದಾಗಿ ಅಧಿಕಾರವನ್ನು ಸ್ವೀಕರಿಸಿದ ಭಾರತ ಸರಕಾರಕ್ಕೆ ನಾವು ಸುಸ್ವಾಗತವನ್ನು ಬಯಸುತ್ತೇವೆ. ಈ ಸರಕಾರ ಭಾರತೀಯ ಸಂಸ್ಕೃತಿ ಮತ್ತು ಪರಂಪರೆಗೆ ಅನುಗುಣವಾಗಿ ಪ್ರಜಾಪ್ರಭುತ್ವವನ್ನು ಮುಂದುವರೆಸಿಕೊಂಡು ಹೋದಲ್ಲಿ ತಾನೂ ಉಳಿವು, ವಿಶ್ವಕ್ಕೇ ತನ್ನ ಆದರ್ಶವನ್ನು ತೋರಿಸಿ ಕೊಟ್ಟೀತು !

ಭದ್ರಂ ! ಶುಭಂ ! ಮಂಗಲಂ !

....

...ೀ ಮದ್ಧನುಮಚ್ಛೀಮ ಮಧ್ವಾಷ್ಟೋತ್ತರ ಶತನಾಮಾವಳಿ

ಬೆಲೆ ೨೫ ಪೈಸೆ

○ ಪ್ರ ಕಾ ಶ ಕ ರು ○

ಸಗರ ಕೃಷ್ಣಾಚಾರ್ಯ ಹಳೆಯಪೇಟೆ ಶಹಪುರ

...ಳಗೋಳ ಬುಕ್ ಸ್ಟಾಲ ಬಸ್ ನಿಲ್ದಾಣ ಶಹಪುರ ಇವರಲ್ಲಿಯು
ದೊರೆಯುತ್ತವೆ.

...ಮುದ್ರಣಾಲಯದಲ್ಲಿ ಲಗ್ನಪತ್ರಿಕೆ ನಾಟಕದ ಕರಪತ್ರಗಳು
...ಆಮಂತ್ರಣ ಪತ್ರಿಕೆಗಳು ಮುಂತಾದವು ಕನ್ನಡ, ಹಿಂದಿ, ಮತ್ತು
...ಗ್ಲಿಷಿನಲ್ಲಿ ಯೋಗ್ಯದರಗಳಲ್ಲಿ ಸುಂದರವಾಗಿ ಅಚ್ಚಾಗುತ್ತವೆ.
● ಒಮ್ಮೆ ಸಂದರ್ಶಿಸಿ ಖಾತ್ರಿ ಮಾಡಿಕೊಳ್ಳಬಹುದು. ●

ಬಸವರಾಜ ಮುದ್ರಣಾಲಯ ಶಹಪುರ!

....

ದಾಕಿನಿ

ಈ ಪತ್ರಿಕೆಯು ಸಗರ ಕೃಷ್ಣಾಚಾರ್ಯರಿಂದ ಸಂಪಾದಿಸಲ್ಪಟ್ಟು ಜಿ. ಎಂ. ಗುರುಬಸವಾಚಾರ್ಯ ಇವರಿಂದ ಶಹಪುರದ ಮಂದಾಕಿನಿ ಛಾಪಾಖಾನದಲ್ಲಿ ಪ್ರಕಾಶಿಸಲ್ಪಟ್ಟಿತು.